# KARNATAKA LOKAYUKTA

No.UPLOK-1/DE.127/2020/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 07.02.2022.

## RECOMMENDATION

Sub:- Departmental inquiry against Sri Prakasha Halammanavar, Panchayath Development Officer, Galagi Grama Panchayath, Kalaghatagi Taluk, Dharwad District - reg.

Ref:- 1) Government Order No.RDP 84 GPS 2020 dt.09.06.2020.

2) Nomination order No. UPLOK-1/DE.127/2020 dated 16.06.2020 of Upalokayukta, State of Karnataka.

3) Inquiry report dated 03.02.2022 of Additional Registrar of Enquiries-14, Karnataka Lokayukta, Bengaluru.

~~~~~

The Government by its order dated 09.06.2020 initiated the disciplinary proceedings against Sri Prakasha Halammanavar, Panchayath Development Officer, Galagi Grama Panchayath, Kalaghatagi Taluk, Dharwad District, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination UPLOK-1/DE.127/2020 dated 16.06.2020 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him.

3. The DGO was tried for the charge of making payment of the bills twice in respect of two works taken up under MGNREG Scheme for the year 2012-13 and thereby committing misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the above charge against the DGO Sri Prakasha Halammanavar, Panchayath Development Officer, Galagi Grama Panchayath, Kalaghatagi Taluk, Dharwad District, is 'not proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Enquiry Officer and exonerate DGO Sri Prakasha Halammanavar, Panchayath Development Officer, Galagi Grama Panchayath, Kalaghatagi Taluk, Dharwad District, of the charges leveled against him.

6. Action taken in the matter shall be intimated to this Authority.

Connected records are enclosed herewith.

7/2/22

(JUSTICE B.S.PATIL)
Upalokayukta,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ-127/2020/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 03/02/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ಪ್ರಕಾಶ ಹಾಲಮ್ಮನವರ,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗಳಗಿ ಗ್ರಾಮ ಪಂಚಾಯಿತಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಜಿಎಂ/6597/2014/ಉನಿವಿ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 16/01/2020.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/84/ಗ್ರಾಪಂಕಾ/2020, ಬೆಂಗಳೂರು, ದಿನಾಂಕ: 09/06/2020.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-1/ಡಿಇ/127/2020, ಬೆಂಗಳೂರು ದಿನಾಂಕ: 16/06/2020.

* * * * * *

ಈ ದೂರನ್ನು, ದೂರುದಾರರಾದ ಶ್ರೀ. ಸಿದ್ದರಾಮಯ್ಯ, ಫಕೀರಯ್ಯ ಸೋಲರಗೊಪ್ಪ, ಗಳಗಿಹುಲಕೊಪ್ಪ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ **ಶ್ರೀ. ಪ್ರಕಾಶ ಹಾಲಮ್ಮನವರ,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗಳಗಿ ಗ್ರಾಮ ಪಂಚಾಯಿತಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಗಳಗಿ ಗ್ರಾಮ ಪಂಚಾಯಿತಿಯಲ್ಲಿ 2012-13ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ ಯೋಜನೆ ಅಡಿಯಲ್ಲಿ (1) ಗಳಗಿ ಗ್ರಾಮದ ಬಮ್ಮಶೆಟ್ಟಿ ಕೆರೆ ಹೊಳು ತೆಗೆಯುವುದು ಅಂದಾಜು ಮೊತ್ತ 2 ಲಕ್ಷ

ರೂಪಾಯಿಗಳು (2) ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರ ಹಾಕುವುದು ಅಂದಾಜು ಮೊತ್ತ 5 ಲಕ್ಷ ರೂಪಾಯಿಗಳಾಗಿದ್ದು, ಈ ಎರಡೂ ಕಾಮಗಾರಿಗಳಿಗೆ ಸಾಮಗ್ರಿ ವೆಚ್ಚದ ಬಾಬ್ತು 2 ಬಾರಿ ಬಿಲ್ಲನ್ನು ಪಾವತಿಸಿ, ಕ್ರ.ಸಂ.1ನೇ ಕಾಮಗಾರಿಯಲ್ಲಿ ರೂ.1,41,568/– ಹಾಗೂ ಕ್ರ.ಸಂ.2ನೇ ಕಾಮಗಾರಿಯಲ್ಲಿ ರೂ.2,38,961/–ಗಳ ಮೊತ್ತ ದುರ್ಬಳಕೆಯಾಗಿರುತ್ತದೆ ಎಂದು ಹೇಳಿರುತ್ತಾರೆ. ಆದ್ದರಿಂದ ಆ.ಸ.ನೌ ರವರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 09/06/2020ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 16/06/2020 ರಂದು ಅಪರ ನಿಬಂಧಕರು, ವಿಚಾರಣೆಗಳು–14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ ಶ್ರೀ. ಪ್ರಕಾಶ ಹಾಲಮ್ಮನವರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗಳಗಿ ಗ್ರಾಮ ಪಂಚಾಯಿತಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ರವರ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು–14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 03/08/2020 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

8–

## ಅನುಬಂಧ–1

## ದೋಷಾರೋಪಣೆ–1

2. ಆ.ಸ.ನೌ. ಶ್ರೀ ಪ್ರಕಾಶ್ ಹಾಲಮ್ಮನವರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗಳಗಿ ಗ್ರಾಮ ಪಂಚಾಯಿತಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಆದ ನೀವು ಗಳಗಿ ಗ್ರಾಮ ಪಂಚಾಯಿತಿಯಲ್ಲಿ ಅಂದರೆ 2012–13ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ. ಯೋಜನೆಯಡಿ ಈ ಕೆಳಗೆ ಹೇಳಿದ ಎರಡು ಕಾಮಗಾರಿಗಳಲ್ಲಿ ಸಾಮಗ್ರಿ ವೆಚ್ಚದ ಬಾಬ್ತು ಎರಡು ಬಾರಿ ಬಿಲ್ಲನ್ನು ಪಾವತಿಸಿದೆ–

1) ಗಳಗಿ ಗ್ರಾಮ ಬಮ್ಮಶೆಟ್ಟಿ ಕೆರೆ ಹೂಳು ತೆಗೆಯುವುದು – ರೂ.2,00,000/–

2) ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರ ಹಾಕುವುದು – ರೂ.5,00,000/–

ಕ್ರಮ ಸಂಖ್ಯೆ. 1) ಕಾಮಗಾರಿಯಲ್ಲಿ ರೂ.1,41,568/– ಮತ್ತು ಕ್ರಮ ಸಂಖ್ಯೆ.2 ಕಾಮಗಾರಿಯಲ್ಲಿ ರೂ.2,38,961/– ಗಳ ಮೊತ್ತ ದುರ್ಬಳಕೆಯಾಗಿದೆ ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

ಕಾಮಗಾರಿಗಳನ್ನು ಎಂ.ಜಿ.ಎನ್.ಆರ್.ಇ.ಜಿ. ಯೋಜನೆ ಅಡಿ ನಿರ್ವಹಿಸಿದ್ದು, ಯೋಜನೆಯ ಮಾರ್ಗಸೂಚಿಗಳನ್ವಯ ಸದರಿ ಕಾಮಗಾರಿಗಳನ್ನು ಸದರಿ ಕಾಮಗಾರಿಗಳನ್ನು ಕಾರ್ಮಿಕರಿಂದ ನಿರ್ವಹಿಸಿದೆಯೆಂದು ಹೇಳುವ ಬಗ್ಗೆ ಮಸ್ಟರ್ ರೋಲ್ ಸಂಖ್ಯೆ.2170, 2661, 3131, 2413, 2673, 3028, 3750 ಮತ್ತು 5419, ಅಳತೆ ವಹಿ, ಕೆಲಸಕ್ಕಾಗಿ ಅರ್ಜಿ (ನಮೂನೆ–6), ಕೆಲಸಕ್ಕಾಗಿ ವರದಿ ಮಾಡಿಕೊಳ್ಳುವ ನೋಟೀಸ್ (ನಮೂನೆ–8) ಮತ್ತು ಭಾವಚಿತ್ರಗಳಿವೆ. ಆದರೆ, ಸದರಿ ಕಾಮಗಾರಿಯಲ್ಲಿ ಕಾರ್ಯನಿರ್ವಹಿಸಿದ ಕಾರ್ಮಿಕರು–

1. ಕಾಮಗಾರಿಗಳನ್ನು ನಿರ್ವಹಿಸಿ ಕೂಲಿ ಹಣ ಅವರ ಖಾತೆಗೆ ಜಮಾ ಆದ ದಾಖಲೆಗಳಿಲ್ಲ;
2. ಕಾರ್ಮಿಕರು ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಸದರಿ ಜಾಬ್ ಕಾರ್ಡ್ ಪ್ರತಿಗಳಿಲ್ಲ;
3. ಉದ್ಯೋಗ ಕೋರಿ ಕಾರ್ಮಿಕರು ಪಂಚಾಯತ್‌ಗೆ ನೀಡಿದ ಅರ್ಜಿಗಳಲ್ಲಿ ದಿನಾಂಕ, ಸಹಿ/ಹೆಬ್ಬೆಟ್ಟಿನ ಗುರುತು ನಮೂದಿಲ್ಲ;
4. ಸದರಿ ಕಾರ್ಮಿಕರು ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಬಗ್ಗೆ ಪಾಸ್ ಪುಸ್ತಕ ಅಥವಾ ಖಾತೆಯ ಉಧೃತ ಭಾಗ ಲಭ್ಯವಿಲ್ಲ.

ಕಾರಣ, ಸದರಿ ಕಾಮಗಾರಿಗಳಲ್ಲಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ತಿಳಿಸಲಾಗಿದೆ ಹಾಗೂ ಮೇಲಿನ ಉಪ ಖಂಡಿಕೆ–3ರಲ್ಲಿ ಹೇಳಿದ ಕಾಮಗಾರಿಗೆ ಸಂಬಂಧಿಸಿದಂತೆ ಒಟ್ಟು ರೂ.3,33,296/– (ಸಾಮಗ್ರಿ ಬಾಬ್ತು ರೂ.1,91,161/– + ಕೂಲಿ ಬಾಬ್ತು ರೂ.1,42,135/–) ಮತ್ತು ಮೇಲಿನ ಉಪಖಂಡಿಕೆ–9ರಲ್ಲಿ ಹೇಳಿದ ಕಾಮಗಾರಿಗೆ ಸಂಬಂಧಿಸಿದಂತೆ ಒಟ್ಟು ರೂ.4,49,488/– (ಸಾಮಗ್ರಿ ಖರ್ಚು ರೂ.2,19,468/– + ರೂ.2,30,020/–) ಗಳನ್ನು ವ್ಯಯಿಸಲಾಗಿದ್ದು, ಒಟ್ಟು ರೂ.7,82,784/–ಗಳ ಮೊತ್ತ ದುರುಪಯೋಗವಾಗಿದ್ದು, ಸದರಿ ದುರುಪಯೋಗದ ಮೊತ್ತಕ್ಕೆ ಶ್ರೀ ಅಣ್ಣಪ್ಪ ಪಿ.ದೇಸಾಯಿ (ಪ್ರಸ್ತುತ ಜಿಲ್ಲಾ ಪಂಚಾಯತ್ ಸದಸ್ಯರು) ಮತ್ತು ಆ.ಸ.ನೌಕರರಾದ ನೀವು ಜವಾಬ್ದಾರರಾಗಿರುತ್ತೀರಿ ಹಾಗೂ ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. **ದೂರಿನ ಸಂಕ್ಷಿಪ್ತ ವಿವರಣೆ:**

ಗಳಗಿ ಗ್ರಾಮ ಪಂಚಾಯತ್‌ನಲ್ಲಿ 2012-13ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ. ಯೋಜನೆ ಅಡಿ ಈ ಕೆಳಗೆ ಹೇಳಿದ ಎರಡು ಕಾಮಗಾರಿಗಳಲ್ಲಿ ಸಾಮಗ್ರಿ ವೆಚ್ಚದ ಬಾಬ್ತು ಎರಡು ಬಾರಿ ಬಿಲ್ಲನ್ನು ಪಾವತಿಸಿದೆ-

1) ಗಳಗಿ ಗ್ರಾಮದ ಬಮ್ಮಶೆಟ್ಟಿ ಕೆರೆ ಹೂಳು ತೆಗೆಯುವುದು - ರೂ.2,00,000.00
2) ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರ ಹಾಕುವುದು - ರೂ.5,00,000.00

ಕ್ರಮ ಸಂಖ್ಯೆ.1 ಕಾಮಗಾರಿಯಲ್ಲಿ ರೂ.1,41,568/- ಮತ್ತು ಕ್ರಮ ಸಂಖ್ಯೆ.2 ಕಾಮಗಾರಿಯಲ್ಲಿ ರೂ.2,38,961/- ಗಳ ಮೊತ್ತ ದುರ್ಬಳಕೆ ಆಗಿದೆಯೆಂದು ಹೇಳಿದ್ದಾರೆ.

4. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಶ್ರೀ ಅಣ್ಣಪ್ಪ ಪಿ.ದೇಸಾಯಿ (ಪ್ರಸ್ತುತ ಜಿಲ್ಲಾ ಪಂಚಾಯತ್ ಸದಸ್ಯರು) ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

5. ಆ.ಸ.ನೌಕರರು ತಮ್ಮ ಆಕ್ಷೇಪಣೆಯಲ್ಲಿ -

ಗಳಗಿ-ಹುಲ್ಲಕೊಪ್ಪ ಗ್ರಾಮದಲ್ಲಿ 2012-13ನೇ ಸಾಲಿನಲ್ಲಿ -

1) ಗಳಗಿ ಗ್ರಾಮದ ಬಮ್ಮಶೆಟ್ಟಿ ಕೆರೆ ಹೂಳು ತೆಗೆಯುವುದು (ಅಂದಾಜು ಮೊತ್ತ ರೂ.1,50,000.00) ಮತ್ತು

2) ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರ ಹಾಕುವುದು (ಅಂದಾಜು ಮೊತ್ತ ರೂ.2,50,000.00)

ಕಾಮಗಾರಿಗಳನ್ನು 2011-12 ಹಾಗೂ 2012-13ನೇ ಸಾಲುಗಳಲ್ಲಿ ಸಾರ್ವಜನಿಕ ಬೇಡಿಕೆ ಮೇರೆಗೆ 1ನೇ ವಾರ್ಡಿನಲ್ಲಿ ಹೆಚ್ಚುವರಿ ಕಾಮಗಾರಿಗಳಾಗೊ ಕೆಲಸವನ್ನು ತೆಗೆದುಕೊಂಡಿದ್ದು, ಯಾವುದೇ ರೀತಿ ಡಬಲ್ ಪೇಮೆಂಟ್ ಆಗಿಲ್ಲವೆಂದು ಹೇಳಿದ್ದಾರೆ.

6. ಆ.ಸ.ನೌಕರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ;

1) ಗಳಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ. ಯೋಜನೆ ಅಡಿ 2012-13ನೇ ಸಾಲಿನ ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ ಹೇಳಿರುವ ಕಾಮಗಾರಿಗಳ ಪೈಕಿ ಈ ಕೆಳಗಿನ ಕಾಮಗಾರಿಗಳು ದೂರಿಗೆ ಸಂಬಂಧಿಸಿದೆ –

| ಕ್ರ. ಸಂ. | ಕಾಮಗಾರಿಯ ಹೆಸರು | ಸಾಮಗ್ರಿ ರೂ.ಗಳಲ್ಲಿ | ಅಕುಶಲ ಕಾರ್ಮಿಕರಿಗೆ ಕೂಲಿ ರೂ.ಗಳಲ್ಲಿ |
|---|---|---|---|
| 1 | ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ಮಠದವರೆಗೆ ನಿಂತ ನೀರನ್ನು ಹೊರ ಹಾಕುವುದು (ಅಂದಾಜು ಮೊತ್ತ ರೂ.5 ಲಕ್ಷ) | 2 ಲಕ್ಷ | 3 ಲಕ್ಷ |
| 2 | ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ | 1 ಲಕ್ಷ | 1.50 ಲಕ್ಷ |

| | | | |
|---|---|---|---|
| | ನೀರನ್ನು ಹೊರ ಹಾಕುವುದು (ಅಂದಾಜು ಮೊತ್ತ ರೂ.2.50 ಲಕ್ಷ) | | |
| 3 | ಗಳಗಿ ಗ್ರಾಮದ ಬಮ್ಮಶೆಟ್ಟಿ ಕೆರೆ ಹೂಳು ತೆಗೆಯುವುದು (ಅಂದಾಜು ಮೊತ್ತ ರೂ.1.50 ಲಕ್ಷ) | 60,000.00 | 90,000.00 |

2) ಸದರಿ ಕಾಮಗಾರಿಗಳ ಸಂಕೇತ ಸಂಖ್ಯೆ. 1513003027/ಡಬ್ಲ್ಯೂಹೆಚ್/83657076014 ಮತ್ತು 1513003027/ಆರ್‌ಸಿ/992248691126 ಆಗಿದೆ;

3) **ಬಮ್ಮಶೆಟ್ಟಿ ಕೆರೆ ಹೂಳು ತೆಗೆಯುವ ಕಾಮಗಾರಿ:- ಕಾಮಗಾರಿಗೆ ಸಂಬಂಧಿಸಿದ ಮಸ್ಟರ್ ರೋಲೆ ಸಂಖ್ಯೆ.2170, 2661 ಮತ್ತು 3131 ಗಳಲ್ಲಿ ಕ್ರಮವಾಗಿ, ರೂ.22,785/-, ರೂ.89,280/- ಮತ್ತು ರೂ.30,070.00 ಗಳನ್ನು ಪಾವತಿಸಿದೆ. ಹೀಗೆ ಕೂಲಿ ಬಾಬ್ತು ಒಟ್ಟು ರೂ.1,42,135/- (917 ಮಾನವ ದಿನಗಳು x ರೂ.155/-)** ಗಳನ್ನು ಪಾವತಿಸಿದೆ.

4) ಕಾಮಗಾರಿಯ ಅಳತೆಯನ್ನು ಎಂ.ಬಿ. ಸಂಖ್ಯೆ.575 ಪುಟ ಸಂಖ್ಯೆ.38 ಮತ್ತು 39ರಲ್ಲಿ ದಾಖಲಿಸಿದೆ ಎಂದು ಮೊದಲನೇ ಮತ್ತು ಅಂತಿಮ ಬಿಲ್ಲಿನಲ್ಲಿ ನಮೂದಿಸಿದೆ. ಆದರೆ ಅಳತೆ ವಹಿ ಲಭ್ಯವಿಲ್ಲ. ಸದರಿ ಕಾಮಗಾರಿಗೆ ಸಾಮಗ್ರಿ ಪೂರೈಕೆಗೆ ಸಂಬಂಧಿಸಿದ ಮೊದಲನೇ ಮತ್ತು ಅಂತಿಮ ಬಿಲ್ಲಿನಲ್ಲಿನ ವಿವರಗಳು ಈ ಕೆಳಗಿನಂತಿದೆ –

| Sl. No. | Name of work | Quantity | Unit | Rate | Amount |
|---|---|---|---|---|---|
| 1 | Conveyance of silt tank bed 1.00 km lead | 2626.98 | -- | 53.89 | 141568 |
| | TOTAL | | | | 141568 |

5) ಸಾಮಗ್ರಿ ಪೂರೈಕೆ ಬಾಬ್ತು ಗುತ್ತಿಗೆದಾರರಿಂದ ಶ್ರೀ ಎಸ್.ಎನ್.ಮಾಡಿಕ್ ರವರಿಗೆ ರೂ.1,34,490/- ಗಳನ್ನು (ರೂ.7,078/- ಗಳ ಶಾಸನಾತ್ಮಕ ಕಡಿತಗಳನ್ನು ಹೊರತುಪಡಿಸಿ) ನೀಡಿರುವುದು ಬಿಲ್ಲಿನಲ್ಲಿ ನಮೂದಿಸಿದೆ;

6) ಮುಂದುವರೆದು, ಅದೇ ಕಾಮಗಾರಿಯ ಸಾಮಗ್ರಿ ಪೂರೈಕೆಗೆ ಸಂಬಂಧಿಸಿದ ಇನ್ನೊಂದು ಮೊದಲನೇ ಮತ್ತು ಅಂತಿಮ ಬಿಲ್ಲಿನ ವಿವರಗಳು ಈ ಕೆಳಗಿನಂತಿದೆ –

| Sl. No. | Item of work | Quantity | Unit | Rate | Amount |
|---|---|---|---|---|---|
| 1 | Conveyance of silt from tank bed 1.00 km lead | 1106.96 Cubic Mtr. | -- | 53.89 | 59654 |
| TOTAL | | | | | 59654 |

7) ಸಾಮಗ್ರಿ ಪೂರೈಕೆ ಬಾಬ್ತು ಗುತ್ತಿಗೆದಾರರಾದ ಶ್ರೀ ಎಸ್.ಎನ್.ಮಾಡಿಕ್ ರವರಿಗೆ ರೂ.56,671/- ಗಳನ್ನು (ರೂ.2,983/-ಗಳ ಶಾಸನಾತ್ಮಕ ಕಡಿತಗಳನ್ನು ಹೊರತುಪಡಿಸಿ) ನೀಡಿರುವುದು ಬಿಲ್ಲಿನಲ್ಲಿ ನಮೂದಿಸಿದೆ;

8) ಸದರಿ ಗುತ್ತಿಗೆದಾರರು ಸಾಮಗ್ರಿಗಳನ್ನು ಪೂರೈಕೆ ಮಾಡಿದ ಬಾಬ್ತು ಕ್ಯಾಷ್/ಕ್ರೆಡಿಟ್ ಬಿಲ್, ಟ್ಯಾಕ್ಸ್ ಇನ್‌ವಾಯ್ಸ್ ಮುಂತಾದ ದಾಖಲೆಗಳಿಲ್ಲ. ಬಿಲ್ಲಿಗೆ ಶ್ರೀ ಅಣ್ಣಪ್ಪ ಪಿ.ದೇಸಾಯಿ (ಪ್ರಸ್ತುತ ಜಿಲ್ಲಾ ಪಂಚಾಯತ್ ಸದಸ್ಯರು) ಮತ್ತು ಆ.ಸ.ನೌಕರರು ಹಾಗೂ ಇತರೆ ಅಧಿಕಾರಿಗಳು ಸಹಿ ಮಾಡಿದ್ದಾರೆ.

9) ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರ ಹಾಕುವ ಕಾಮಗಾರಿ:- ಕಾಮಗಾರಿಗೆ ಸಂಬಂಧಿಸಿದ ಮಸ್ಟರ್ ರೋಲ್ ಸಂಖ್ಯೆ:2413, 2673, 3750,

5419 ಮತ್ತು 3028 ಗಳಲ್ಲಿ ಕ್ರಮವಾಗಿ, ರೂ.55,800/-, ರೂ.53,940/-, ರೂ.46,500/-, ರೂ.36,270/- ಮತ್ತು ರೂ.37,510.00 ಗಳನ್ನು ಪಾವತಿಸಿದೆ. ಹೀಗೆ ಕೂಲಿ ಬಾಬ್ತು ಒಟ್ಟು ರೂ.2,30,020/- ಗಳನ್ನು ಪಾವತಿಸಿದೆ.

10) ಕಾಮಗಾರಿಗಳ ಅಳತೆಯನ್ನು ಎಂ.ಬಿ. ಸಂಖ್ಯೆ.811 ಪುಟ ಸಂಖ್ಯೆ.82 ಮತ್ತು 84 ರಲ್ಲಿ ದಾಖಲಿಸಿದೆಯೆಂದು ಬಿಲ್ಲಿನಲ್ಲಿ ನಮೂದಿಸಿದೆ. ಅದೇ ಕಾಮಗಾರಿಗೆ ಸಂಬಂಧಿಸಿದ ಅಳತೆ ವಹಿ ಸಂಖ್ಯೆ:811ರ ಪುಟ ಸಂಖ್ಯೆ.75 ರಿಂದ 78 ಕಡತದಲ್ಲಿದ್ದು, ಸದರಿ ಅಳತೆಯನ್ನು ಆ.ಸ.ನೌಕರರು ದಾಖಲಿಸಿರುವಂತೆ ದಿನಾಂಕವನ್ನು ನಮೂದಿಸದೇ ಸಹಿ ಮಾಡಿದ್ದು, ಶ್ರೀ ಅಣ್ಣಪ್ಪ ಪಿ.ದೇಸಾಯಿ (ಪ್ರಸ್ತುತ ಜಿಲ್ಲಾ ಪಂಚಾಯತ್ ಸದಸ್ಯರು) ಸಹ ಸದರಿ ಅಳತೆ ವಹಿಯಲ್ಲಿ ದಿನಾಂಕವನ್ನು ನಮೂದಿಸದೇ ಸಹಿ ಮಾಡಿದ್ದಾರೆ. ಅಂದಾಜು ಪಟ್ಟಿಯಲ್ಲಿನ ಎಲ್ಲಾ ಅಂಶಗಳನ್ನೇ ಯಥಾವತ್ತಾಗಿ ಸದರಿ ಅಳತೆ ವಹಿಯಲ್ಲಿ ಏಕಕಾಲಕ್ಕೆ ದಾಖಲಿಸಿದಂತೆ ಕಂಡು ಬಂದಿದೆ;

11) ಸದರಿ ಕಾಮಗಾರಿಗೆ ಸಾಮಗ್ರಿ ಪೂರೈಕೆಗೆ ಸಂಬಂಧಿಸಿದ ಮೊದಲನೇ ಮತ್ತು ಅಂತಿಮ ಬಿಲ್ಲಿನಲ್ಲಿನ ವಿವರಗಳು ಈ ಕೆಳಗಿನಂತಿದೆ –

| Sl. No. | Name of work | Quantity | Unit | Rate | Amount |
|---|---|---|---|---|---|
| 1 | Supplying & conveyance of cement bags including loading & uploading | 755.53 | -- | 300.00 | 226659 |
| 2 | Supplying & conveyance of Murram to work spot | 94.615 | -- | 130.00 | 12300 |
| | TOTAL | | | | 238959 |

ಕ–

12) ಸಾಮಗ್ರಿ ಪೂರೈಕೆ ಬಾಬ್ತು ಗುತ್ತಿಗೆದಾರರಾದ ಶ್ರೀ ಶಿವ ಮೆಟೀರಿಯಲ್ಸ್ ಸಪ್ಲೈಯರ್ಸ್ ರವರಿಗೆ ರೂ.2,22,232/- ಗಳನ್ನು (ರೂ.16,727/- ಗಳ ಶಾಸನಾತ್ಮಕ ಕಡಿತಗಳನ್ನು ಹೊರುತಪಡಿಸಿ) ನೀಡಿರುವುದು ಬಿಲ್ಲಿನಲ್ಲಿ ನಮೂದಿಸಿದೆ;

13) ಸದರಿ ಕಾಮಗಾರಿಗೆ ಸಾಮಗ್ರಿ ಪೂರೈಕೆಗೆ ಸಂಬಂಧಿಸಿದ ಮೊದಲನೇ ಮತ್ತು ಅಂತಿಮ ಬಿಲ್ಲಿನಲ್ಲಿನ ವಿವರಗಳು ಈ ಕೆಳಗಿನಂತಿದೆ–

| Sl. No. | Item of work | Quantity | Unit | Rate | Amount |
|---|---|---|---|---|---|
| 1 | Supplying & conveyance of cement bags including loading & unloading | 412.00 bags | -- | 300.00 | 123600 |
| 2 | Supplying & conveyance of Murram to work spot | 40.50 Cubic Mtr. | -- | 130.00 | 5265 |
| TOTAL | | | | | 128865 |

14) ಸಾಮಗ್ರಿ ಪೂರೈಕೆ ಬಾಬ್ತು ಗುತ್ತಿಗೆದಾರರಾದ ಶ್ರೀ ಶಿವ ಮೆಟೀರಿಯಲ್ಸ್ ಸಪ್ಲೈಯರ್ಸ್ ರವರಿಗೆ ರೂ.1,21,814/- ಗಳನ್ನು (ರೂ.7,051/-ಗಳ ಶಾಸನಾತ್ಮಕ ಕಡಿತಗಳನ್ನು ಹೊರತುಪಡಿಸಿ) ನೀಡಿರುವುದು ಬಿಲ್ಲಿನಲ್ಲಿ ನಮೂದಿಸಿದೆ.

15) ಮುಂದುವರೆದು, ಅದೇ ಕಾಮಗಾರಿಯ ಸಾಮಗ್ರಿ ಪೂರೈಕೆರೆ ಸಂಬಂಧಿಸಿದ ಇನ್ನೊಂದು ಮೊದಲನೇ ಮತ್ತು ಅಂತಿಮ ಬಿಲ್ಲಿನ ವಿವರಗಳು ಈ ಕೆಳಗಿನಂತಿದೆ –

| Sl. No. | Item of work | Quantity | Unit | Rate | Amount |
|---|---|---|---|---|---|
| 1 | Supplying & conveyance of 40 mm & down size graded granite metal for bed | 7.80 Cubic Mtr. | -- | 770.00 | 6006 |

| | | | | | |
|---|---|---|---|---|---|
| 2 | Supplying & conveyance of 20 mm & down size graded granite metal for coping | 43.47 Cubic Mtr. | -- | 1135.00 | 49338 |
| 3 | Supplying & conveyance of Fine sand for coping slab & plastering | 40.57 Cubic Mtr. | -- | 316.00 | 12820 |
| 4 | Supplying & conveyance of Uncorsed rubble stone of granite /trap/Basalt masonary in foundation | 38.12 Cubic Mtr. | -- | 1100.00 | 41932 |
| TOTAL | | | | | 110096 |

16) ಸಾಮಗ್ರಿ ಪೂರೈಕೆ ಬಾಬ್ತು ಗುತ್ತಿಗೆದಾರರಾದ ಶ್ರೀ ಶಿವ ಮೆಟೀರಿಯಲ್ಸ್ ಸಪ್ಲೈಯರ್ಸ್ ರವರಿಗೆ ರೂ.97,654/- ಗಳನ್ನು (ರೂ.12,442/-ಗಳ ಶಾಸನಾತ್ಮಕ ಕಡಿತಗಳನ್ನು ಹೊರತುಪಡಿಸಿ) ನೀಡಿರುವುದು ಬಿಲ್ಲಿನಲ್ಲಿ ನಮೂದಿಸಿದೆ;

17) ಸದರಿ ಗುತ್ತಿಗೆದಾರರು ಸಾಮಗ್ರಿಗಳನ್ನು ಪೂರೈಕೆ ಮಾಡಿದ ಬಾಬ್ತು ಕ್ಯಾಷ್/ಕ್ರೆಡಿಟ್ ಬಿಲ್, ಟ್ಯಾಕ್ಸ್ ಇನ್‌ವಾಯ್ಸ್ ಮುಂತಾದ ದಾಖಲೆಗಳಿಲ್ಲ. ಬಿಲ್ಲಿಗೆ ಶ್ರೀ ಅಣ್ಣಪ್ಪ ಪಿ.ದೇಸಾಯಿ (ಪ್ರಸ್ತುತ ಜಿಲ್ಲಾ ಪಂಚಾಯತ್ ಸದಸ್ಯರು) ಮತ್ತು ಆ.ಸ.ನೌಕರರು ಹಾಗೂ ಇತರೆ ಅಧಿಕಾರಿಗಳು ಸಹಿ ಮಾಡಿದ್ದಾರೆ.

18) ಮೇಲೆ ಹೇಳಿದ ಕಾಮಗಾರಿಗಳನ್ನು ಎಂ.ಜಿ.ಎನ್.ಆರ್.ಇ.ಜಿ. ಯೋಜನೆ ಅಡಿ ನಿರ್ವಹಿಸಿದ್ದು, ಯೋಜನೆಯ ಮಾರ್ಗಸೂಚಿಗಳನ್ವಯ ಸದರಿ ಕಾಮಗಾರಿಗಳನ್ನು ಸದರಿ ಕಾಮಗಾರಿಗಳನ್ನು ಕಾರ್ಮಿಕರಿಂದ ನಿರ್ವಹಿಸಿದೆಯೆಂದು ಹೇಳುವ ಬಗ್ಗೆ ಮಸ್ಟರ್ ರೋಲ್ ಸಂಖ್ಯೆ.2170, 2661, 3131, 2413, 2673, 3028, 3750 ಮತ್ತು 5419, ಅಳತೆ ವಹಿ, ಕೆಲಸಕ್ಕಾಗಿ ಅರ್ಜಿ (ನಮೂನೆ-6), ಕೆಲಸಕ್ಕಾಗಿ ವರದಿ ಮಾಡಿಕೊಳ್ಳುವ

ನೋಟೀಸ್ (ನಮೂನೆ-8) ಮತ್ತು ಭಾವಚಿತ್ರಗಳಿವೆ. ಆದರೆ, ಸದರಿ ಕಾಮಗಾರಿಯಲ್ಲಿ ಕಾರ್ಯನಿರ್ವಹಿಸಿದ ಕಾರ್ಮಿಕರು-

1. ಕಾಮಗಾರಿಗಳನ್ನು ನಿರ್ವಹಿಸಿ ಕೂಲಿ ಹಣ ಅವರ ಖಾತೆಗೆ ಜಮಾ ಆದ ದಾಖಲೆಗಳಿಲ್ಲ;
2. ಕಾರ್ಮಿಕರು ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಸದರಿ ಜಾಬ್ ಕಾರ್ಡ್ ಪ್ರತಿಗಳಿಲ್ಲ;
3. ಉದ್ಯೋಗ ಕೋರಿ ಕಾರ್ಮಿಕರು ಪಂಚಾಯತ್‌ಗೆ ನೀಡಿದ ಅರ್ಜಿಗಳಲ್ಲಿ ದಿನಾಂಕ, ಸಹಿ/ಹೆಬ್ಬೆಟ್ಟಿನ ಗುರುತು ನಮೂದಿಲ್ಲ;
4. ಸದರಿ ಕಾರ್ಮಿಕರು ಬ್ಯಾಂಕ್‌ನಲ್ಲಿ ಖಾತೆ ಹೊಂದಿರುವ ಬಗ್ಗೆ ಪಾಸ್ ಪುಸ್ತಕ ಅಥವಾ ಖಾತೆಯ ಉದ್ಧೃತ ಭಾಗ ನಮೂದಿಲ್ಲ;

ಕಾರಣ, ಸದರಿ ಕಾಮಗಾರಿಗಳಲ್ಲಿ ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

19) ಮೇಲಿನ ಉಪ ಖಂಡಿಕೆ-3ರಲ್ಲಿ ಹೇಳಿದ ಕಾಮಗಾರಿಗೆ ಸಂಬಂಧಿಸಿದಂತೆ ಒಟ್ಟು ರೂ.3,33,296/- (ಸಾಮಗ್ರಿ ಬಾಬ್ತು ರೂ.1,91,161/- + ಕೂಲಿ ಬಾಬ್ತು ರೂ.1,42,135/-) ಮತ್ತು ಮೇಲಿನ ಉಪಖಂಡಿಕೆ-9ರಲ್ಲಿ ಹೇಳಿದ ಕಾಮಗಾರಿಗೆ ಸಂಬಂಧಿಸಿದಂತೆ ಒಟ್ಟು ರೂ.4,49,488/- (ಸಾಮಗ್ರಿ ಖರ್ಚು ರೂ.2,19,468/- + ರೂ.2,30,020/-) ಗಳನ್ನು ವ್ಯಯಿಸಲಾಗಿದ್ದು, ಒಟ್ಟು ರೂ.7,82,784/-ಗಳ ಮೊತ್ತ ದುರುಪಯೋಗವಾಗಿದ್ದು, ಸದರಿ ದುರುಪಯೋಗದ ಮೊತ್ತಕ್ಕೆ ಶ್ರೀ ಅಣ್ಣಪ್ಪ ಪಿ.ದೇಸಾಯಿ (ಪ್ರಸ್ತುತ ಜಿಲ್ಲಾ ಪಂಚಾಯತ್ ಸದಸ್ಯರು)

ಮತ್ತು ಆ.ಸ.ನೌಕರರು ಜವಾಬ್ದಾರರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಶ್ರೀ ಅಣ್ಣಪ್ಪ ಪಿ.ದೇಸಾಯಿ (ಪ್ರಸ್ತುತ ಜಿಲ್ಲಾ ಪಂಚಾಯತ್ ಸದಸ್ಯರು) ಮತ್ತು ಆ.ಸ.ನೌಕರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಶ್ರೀ ಅಣ್ಣಪ್ಪ ಪಿ.ದೇಸಾಯಿ (ಪ್ರಸ್ತುತ ಜಿಲ್ಲಾ ಪಂಚಾಯತ್ ಸದಸ್ಯರು), ಧಾರವಾಡ ರವರು ಗಳಗಿ ಗ್ರಾಮ ಪಂಚಾಯತ್ ಸದಸ್ಯರಾಗಿದ್ದು, ಸದರಿಯವರ ವಿರುದ್ಧ ಕರ್ನಾಟ ಪಂಚಾಯತ್ ರಾಜ್ ಕಾಯಿದೆ ಅಡಿ ಕ್ರಮ ಕೈಗೊಳ್ಳುವುದು ಹಾಗೂ ದುರುಪಯೋಗ ಮೊತ್ತವನ್ನು ವಸೂಲಿ ಮಾಡಿ ಸಕ್ಷಮ ಪ್ರಾಧಿಕಾರಕ್ಕೆ ಈಗಾಗಲೇ ಸೂಚಿಸಲಾಗಿದೆ.

10. ಶ್ರೀ ಪ್ರಕಾಶ್ ಹಾಲಮ್ಮನವರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗಳಗಿ ಗ್ರಾಮ ಪಂಚಾಯಿತಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಆ.ಸ.ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರ ಅಡಿಯಲ್ಲಿ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶ ಮಾಡಿದ್ದು,

ಉಪಲೋಕಾಯುಕ್ತರವರು ಇಲಾಖಾ ವಿಚಾರಣೆಗೆ ಅಪರ ನಿಬಂಧಕರು, ವಿಚಾರಣೆಗಳು–14 ರವರಿಗೆ ಆದೇಶಿಸಿರುತ್ತಾರೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 06/10/2020 ರಂದು ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ, ಆ.ಸ.ನೌರವರ ದೂರಿನಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯಕ್ಕೆ ದೂರವಿರುತ್ತದೆ ಅವುಗಳಲ್ಲಿ ಯಾವುದೇ ಹುರುಳಿರುವುದಿಲ್ಲ ಎಂದು ಹೇಳಿರುತ್ತಾರೆ. ಮುಂದುವರೆದು, ತಾನು ಯಾವುದೇ ಹಣ ದುರ್ಬಳಕೆ ಮಾಡಿರುವುದಿಲ್ಲ, ಕಾನೂನು ವ್ಯಾಪ್ತಿಯಲ್ಲಿ ಕೆಲಸವನ್ನು ಮಾಡಿದ್ದು ಮತ್ತು ಎಂ.ಜಿ.ಎನ್.ಆರ್.ಇ.ಜಿ ಯೋಜನೆ ಅಡಿಯಲ್ಲಿ ನಿಯಮಗಳನ್ನು ಕ್ರಮವಾಗಿ ಮತ್ತು ಕಡ್ಡಾವಾಗಿ ಪಾಲಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಮುಂದುವರೆದು, ದೋಷಾರೋಪಣೆಯಲ್ಲಿ ಹೇಳಿದ ಹಾಗೆ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲ ಮತ್ತು ದುರ್ಬಳಕೆಯಾಗಿರುವುದಿಲ್ಲ, ಕೇವಲ ಊಹೆ ಮೇರೆಗೆ

ದೂರನ್ನು ಸಲ್ಲಿಸಲಾಗಿದೆ ಎಂದು ಹೇಳಿರುತ್ತಾರೆ. ಆದ್ದರಿಂದ, ತನ್ನ ಕಡೆಯಿಂದ ಯಾವುದೇ ಕರ್ತವ್ಯ ಲೋಪ ಆಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

8. ಈ ವಿಚಾರಣೆಯಲ್ಲಿ ದೂರುದಾರರು ಮೃತಪಟ್ಟಿರುವುದರಿಂದ, ದೋಷಾರೋಪಣೆಯಲ್ಲಿ ಹೇಳಿದ ವಿಷಯವನ್ನು ರುಜುವಾತಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಉಪ ನಿಬಂಧಕರು ವಿಚಾರಣೆಗಳು–4 ರವರನ್ನು ಪಿ.ಡಬ್ಲ್ಯೂ.1 ಎಂದು ನುಡಿ ಸಾಕ್ಷಿ ಮಾಡಿಸಿರುತ್ತಾರೆ. ತಮ್ಮ ಪರವಾಗಿ ನಿ.ಪಿ.1 ರಿಂದ 21 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ತಮ್ಮ ಸಾಕ್ಷ್ಯ ನುಡಿಸಿಕೊಂಡು, ನಿ.ಡಿ.1 ರಿಂದ 6 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

10. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

11. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ನಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

**ಕಾರಣಗಳು**

13. ದೂರುದಾರರಾದ **ಶ್ರೀ. ಸಿದ್ದರಾಮಯ್ಯ,** ಫಕೀರಯ್ಯ ಸೋಲರಗೊಪ್ಪ, ಗಳಗಿಹುಲಕೊಪ್ಪ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರು ತಮ್ಮ ದೂರಿನಲ್ಲಿ ಗಳಗಿ ಗ್ರಾಮ ಪಂಚಾಯಿತಿಯಲ್ಲಿ 2012-13ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ ಯೋಜನೆ ಅಡಿಯಲ್ಲಿ (1) ಗಳಗಿ ಗ್ರಾಮದ ಬಮ್ಮಶೆಟ್ಟಿ ಕೆರೆ ಹೂಳು ತೆಗೆಯುವುದು ಅಂದಾಜು ಮೊತ್ತ 2 ಲಕ್ಷ ರೂಪಾಯಿಗಳು (2) ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರ ಹಾಕುವುದು ಅಂದಾಜು ಮೊತ್ತ 5 ಲಕ್ಷ ರೂಪಾಯಿಗಳಾಗಿದ್ದು, ಈ ಎರಡೂ ಕಾಮಗಾರಿಗಳಿಗೆ ಸಾಮಗ್ರಿ ವೆಚ್ಚದ ಬಾಬ್ತು 2 ಬಾರಿ ಬಿಲ್ಲನ್ನು ಪಾವತಿಸಿ, ಕ್ರ.ಸಂ.1ನೇ ಕಾಮಗಾರಿಯಲ್ಲಿ ರೂ.1,41,568/- ಹಾಗೂ ಕ್ರ.ಸಂ.2ನೇ ಕಾಮಗಾರಿಯಲ್ಲಿ ರೂ.2,38,961/-ಗಳ ಮೊತ್ತ ದುರ್ಬಳಕೆಯಾಗಿರುತ್ತದೆ ಎಂದು ಹೇಳಿರುತ್ತಾರೆ.

14. ಈ ವಿಚಾರಣೆಯಲ್ಲಿ ದೂರುದಾರರು ಮೃತಪಟ್ಟಿರುವುದರಿಂದ, ದೋಷಾರೋಪಣೆಯಲ್ಲಿ ಹೇಳಿದ ವಿಷಯವನ್ನ ರುಜುವಾತಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಉಪ ನಿಬಂಧಕರು ವಿಚಾರಣೆಗಳು-4 ರವರನ್ನು ಪಿ.ಡಬ್ಲ್ಯೂ.1 ಎಂದು ನುಡಿ ಸಾಕ್ಷಿ ಮಾಡಿಸಿರುತ್ತಾರೆ. ತಮ್ಮ ಪರವಾಗಿ ನಿ.ಪಿ.1 ರಿಂದ 21 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1 ಇದು ದೂರು; ನಿ.ಪಿ.2 ಇದು ಫಾರಂ ನಂ.1 ಮತ್ತು ನಿ.ಪಿ.3 ಇದು ಫಾರಂ ನಂ.2; ನಿ.ಪಿ.4 ಇದು ಗಳಗಿ ಗ್ರಾಮದ ಬಮ್ಮಶೆಟ್ಟಿ ಕೆರೆಯ ಹೂಳು ತೆಗೆಯುವುದು ಇದರ ಅಂದಾಜುಪಟ್ಟಿ; ನಿ.ಪಿ.5 ಇದು ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರ ಹಾಕುವುದು ಅಂದಾಜುಪಟ್ಟಿ; ನಿ.ಪಿ.6 ರಿಂದ ನಿ.ಪಿ.8 ಮೊದಲನೇ ಕಾಮಗಾರಿಗೆ

ಸಂಬಂಧಪಟ್ಟಂತೆ ಮಸ್ಟರ್ ರೋಲ್; ನಿ.ಪಿ.9 ಮತ್ತು ನಿ.ಪಿ.10 ಮೊದಲನೇ ಕಾಮಗಾರಿಗೆ ಸಂಬಂಧಪಟ್ಟಂತೆ ಮೊದಲನೆಯ ಮತ್ತು ಕೊನೆಯ ಬಿಲ್ಲು; ನಿ.ಪಿ.11 ರಿಂದ ನಿ.ಪಿ.15 ರವರೆಗೆ ಎರಡನೇ ಕಾಮಗಾರಿಗೆ ಸಂಬಂಧಪಟ್ಟಂತೆ ಮಸ್ಟರ್ ರೋಲ್; ನಿ.ಪಿ.16 ಇದು ಎರಡನೇ ಕಾಮಗಾರಿಗೆ ಸಂಬಂಧಪಟ್ಟಂತೆ ಮೊದಲನೆಯ ಮತ್ತು ಕೊನೆಯ ಬಿಲ್ಲು; ನಿ.ಪಿ.17 ಇದು ಎರಡನೇ ಕಾಮಗಾರಿಗೆ ಸಂಬಂಧಪಟ್ಟ ಅಳತೆ ಪುಸ್ತಕ; ನಿ.ಪಿ.18 ಮತ್ತು ನಿ.ಪಿ.19 ಎರಡನೇ ಎರಡನೇ ಕಾಮಗಾರಿಗೆ ಸಂಬಂಧಪಟ್ಟಂತೆ ಮೊದಲನೆಯ ಮತ್ತು ಕೊನೆಯ ಬಿಲ್ಲು; ನಿ.ಪಿ.20 ಇದು ಕೂಲಿ ಕಾರ್ಮಿಕರು ಸಲ್ಲಿಸಿದ ಅರ್ಜಿಗಳ ಪ್ರತಿ ಮತ್ತು ನಿ.ಪಿ.21 ಇದು ಎರಡನೇ ಕಾಮಗಾರಿಗೆ ಸಂಬಂಧಪಟ್ಟಂತೆ ಮೊದಲನೆಯ ಮತ್ತು ಕೊನೆಯ ಬಿಲ್ಲು ಆಗಿರುತ್ತದೆ.

15. ಆ.ಸ.ನೌರವರು ಪಿ.ಡಬ್ಲ್ಯೂ.1 ರವರ ಪಾಟಿ ಸವಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ ಯೋಜನೆ ಅಡಿಯಲ್ಲಿ ಕ್ರಿಯಾ ಯೋಜನೆಯನ್ನು ತಯಾರಿಸಿ ತಾಲ್ಲೂಕು ಪಂಚಾಯಿತಿ ಅನುಮೋದನೆಗಾಗಿ ಕಳುಹಿಸಿ ಕೊಡುವುದು ಆ.ಸ.ನೌರವರ ಕರ್ತವ್ಯವಾಗಿತ್ತು ಅಂತಾ ಮಾಡಿದ ಸಲಹೆಗೆ ಪಿ.ಡಬ್ಲ್ಯೂ.1 ರವರು ಅಲ್ಲಗಳೆದಿರುತ್ತಾರೆ. ಈ ಯೋಜನೆಗೆ ಸಂಬಂಧಪಟ್ಟಂತೆ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನಿರ್ವಹಿಸಿರುತ್ತಾರೆ, ನಂತರ ಅವರು ಸದರಿ ಅಂದಾಜುಪಟ್ಟಿ ಮತ್ತು ನಕ್ಷೆಯನ್ನು ಮುಖ್ಯ ಅಭಿಯಂತರರ ಅನುಮೋದನೆಗಾಗಿ ಕಳುಹಿಸಿಕೊಟ್ಟಿದ್ದು, ನಂತರ ಜಿಲ್ಲಾ ಪಂಚಾಯಿತಿ ಸಿ.ಇ.ಓ ರವರ ಸಹಿಗಾಗಿ ಕಳುಹಿಸಿಕೊಟ್ಟಿದ್ದು ಇರುತ್ತದೆ ಹಾಗೂ ಕ್ರಿಯಾ ಯೋಜನೆಗೆ ಮೇಲೆ ಹೇಳಿದ ಅಧಿಕಾರಿಗಳು ಮತ್ತು ಸಹಾಯಕ ನಿರ್ದೇಶಕರು ಸಹಿ ಹಾಕಿರುತ್ತಾರೆ ಅಂತಾ ಮಾಡಿದ ಸಲಹೆಗೆ ತನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಯೋಜನೆಗೆ ಎಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕರು ನಿರ್ಧರಿಸಿರುತ್ತಾರೆ ಎನ್ನುವುದಕ್ಕೆ ಪಿ.ಡಬ್ಲ್ಯೂ.1 ರವರು ಅಲ್ಲಗಳೆದಿರುತ್ತಾರೆ. ಅಳತೆ ಪುಸ್ತಕವನ್ನು ನಿರ್ವಹಣೆ ಮಾಡುವುದು ತನ್ನ ಕರ್ತವ್ಯ ಅಲ್ಲ ಅಂತಾ ಮಾಡಿದ ಸಲಹೆಗೆ ಪಿ.ಡಬ್ಲ್ಯೂ.1 ರವರು ಅಲ್ಲಗಳೆದಿರುತ್ತಾರೆ. ಜಾಬ್ ಕಾರ್ಡ್‌ನ್ನು ಒಂದು ಕುಟುಂಬದಲ್ಲಿ ಒಬ್ಬ ವ್ಯಕ್ತಿಗೆ ಮಾತ್ರವೇ ನೀಡಲಾಗಿರುತ್ತದೆ. ಜಾಬ್ ಕಾರ್ಡ್‌ನ್ನು ಒಂದು ಕುಟುಂಬದ ಹಿರಿಯ ವ್ಯಕ್ತಿಗೆ ನೀಡಿದ್ದು ಮತ್ತು

ಅದರ ಅಡಿಯಲ್ಲಿ ಕುಟುಂಬದವರೆಲ್ಲರೂ ಕೂಲಿ ಕೆಲಸ ಮಾಡಿರುತ್ತಾರೆ. ಜಾಬ್ ಕಾರ್ಡ್ ಯಾರ ಹೆಸರಿನಲ್ಲಿರುತ್ತದೆ ಆ ವ್ಯಕ್ತಿಯ ಬ್ಯಾಂಕ್ ಖಾತೆಗೆ ಕೂಲಿ ಹಣ ಜಮಾ ಆಗುತ್ತದೆ. ಹಿರಿಯ ವ್ಯಕ್ತಿ ಈ ಬಗ್ಗೆ ಒಂದು ಖಾತೆಯನ್ನು ನಿರ್ವಹಿಸಿ ಹಣ ಪಡೆದವರ ಸಹಿಯನ್ನು ಪಡೆದಿರುತ್ತಾರೆ ಅಂತಾ ಮಾಡಿದ ಸಲಹೆಗೆ ಪಿ.ಡಬ್ಲ್ಯೂ.1 ರವರು ಅಲ್ಲಗಳೆದಿರುತ್ತಾರೆ. ಪ್ರತಿ ಮಾರ್ಚ್ ತಿಂಗಳಿನಲ್ಲಿ ಗ್ರಾಮ ಪಂಚಾಯಿತಿಯ ಖರ್ಚು ವೆಚ್ಚದ ಲೆಕ್ಕ ಪರಿಶೋಧನೆ ನಡೆಸಿ ಪ್ರತಿಯೊಂದು ಕಾಗದ ಪತ್ರಗಳನ್ನು ಪರಿಶೀಲನೆ ಮಾಡುತ್ತಾರೆ ಎನ್ನುವುದು ಸರಿ ಅಂತಾ ಒಪ್ಪಿಕೊಂಡಿರುತ್ತಾರೆ. ಅಲ್ಲದೇ ಗುತ್ತಿಗೆದಾರರಿಂದ ನೀಡಲ್ಪಟ್ಟ ಕ್ಯಾಷ್ ಕ್ರೆಡಿಟ್ ಬಿಲ್, ಟಾಕ್ಸ್ ಇನ್ವಾಸ್‌ನ್ನು ಅವರೇ ಪರಿಶೀಲಿಸುರತ್ತಾರೆ ಎನ್ನುವುದಕ್ಕೆ ಪಿ.ಡಬ್ಲ್ಯೂ.1 ರವರು ತನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ದೂರುದಾರರು ಪಂಚಾಯಿತಿ ಆಸ್ತಿ ಸರ್ವೆ ನಂ.152, ಗಳಗಿ ಹುಲ್ಲುಕೊಪ್ಪ ಗ್ರಾಮ, ಸ್ವತ್ತನ್ನು ಅತಿಕ್ರಮವಾಗಿ ಆಕ್ರಮಿಸಿ ಸ್ವಾಧೀನವನ್ನು ಹೊಂದಿದ್ದು, ತಾನು ಆತನನ್ನು ಸ್ವಾಧೀನದಿಂದ ತೆರವು ಮಾಡಿದ ಕಾರಣ, ಆ ದ್ವೇಷದಿಂದ ಈ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಅಂತಾ ವಾದ ಇರುತ್ತದೆ.

16. ದೋಷಾರೋಪಣೆ ಅನುಬಂಧ-1ರ ಪ್ರಕಾರ ಆ.ಸ.ನೌ ರವರು 2012-13ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ ಯೋಜನೆ ಅಡಿಯಲ್ಲಿ ಎರಡೂ ಕಾಮಗಾರಿಗಳಲ್ಲಿ ಅಂದರೆ (1) ಗಳಗಿ ಗ್ರಾಮದ ಬಮ್ಮಶೆಟ್ಟಿ ಕೆರೆ ಹೊಳು ತೆಗೆಯುವುದು ರೂ.2 ಲಕ್ಷ (2) ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ದೂರನ್ನು ಹೊರಹಾಕುವುದು ರೂ.5 ಲಕ್ಷ ಅಂತಾ ನಮೂದು ಇರುತ್ತದೆ. ಮುಂದುವರೆದು, ಈ ಎರಡೂ ಕಾಮಗಾರಿಗಳಲ್ಲಿ ಕಾಮಗಾರಿ ಕ್ರ.ಸಂ.1ರಲ್ಲಿ ರೂ.1,41,568/- ಮೊತ್ತದ ಸಾಮಗ್ರಿ ವೆಚ್ಚದ ಬಾಬ್ತು ಎರಡು ಬಿಲ್ಲು ಪಾವತಿಸಿದೆ ಹಾಗೂ ಕಾಮಗಾರಿ ಕ್ರ.ಸಂ.2ರಲ್ಲಿ ರೂ.2,38,961/- ಗಳ ಸಾಮಗ್ರಿ ವೆಚ್ಚದ ಬಾಬ್ತು ಎರಡು ಬಿಲ್ಲುಗಳನ್ನು ಪಾವತಿಸಿದೆ ಅಂತಾ ನಮೂದು ಇರುತ್ತದೆ.

17. ದೋಷೋರೋಪಣೆ ವಿವರ ಅನುಬಂಧ-2ರಲ್ಲಿ ಪ್ಯಾರಾ ನಂ.7(1) ರಲ್ಲಿ 3 ಕಾಮಗಾರಿಗಳ ಬಗ್ಗೆ ನಮೂದು ಇರುತ್ತದೆ. (1) ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ಮಠದವರೆಗೆ

ನಿಂತ ನೀರನ್ನು ಹೊರಹಾಕುವುದು ಅಂದಾಜು ಮೊತ್ತ ರೂ.5 ಲಕ್ಷ. ಇದರಲ್ಲಿ ಸಾಮಗ್ರಿ ರೂಪದಲ್ಲಿ ರೂ.2 ಲಕ್ಷ, ಅಕುಷಲ ಕಾರ್ಮಿಕರ ಕೂಲಿ ರೂ.3 ಲಕ್ಷ. (2) ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರಹಾಕುವುದು ಅಂದಾಜು ಮೊತ್ತ ರೂ.2.5 ಲಕ್ಷ. ಇದರಲ್ಲಿ ಸಾಮಗ್ರಿ ರೂಪದಲ್ಲಿ ರೂ.1 ಲಕ್ಷ, ಅಕುಷಲ ಕಾರ್ಮಿಕರ ಕೂಲಿ ರೂ.1.5 ಲಕ್ಷ. (3) ಗಳಗಿ ಗ್ರಾಮದ ಬಮ್ಮಶೆಟ್ಟಿ ಕೆರೆ ಹೊಳು ತೆಗೆಯುವುದು ಅಂದಾಜು ಮೊತ್ತ ರೂ.1.5 ಲಕ್ಷ. ಇದರಲ್ಲಿ ಸಾಮಗ್ರಿ ರೂಪದಲ್ಲಿ 60 ಸಾಪಿರ ರೂಪಾಯಿಗಳು ಮತ್ತು ಅಕುಷಲ ಕಾರ್ಮಿಕರ ಕೂಲಿ 90 ಸಾವಿರ ರೂಪಾಯಿಗಳು. ಒಟ್ಟು ಕಾಮಗಾರಿಗಳ ಮೊತ್ತ ರೂ.5,00,000/– + ರೂ.2,50,000/– + ರೂ.1,50,000/– ಹೀಗೆ ಒಟ್ಟು ಮೊತ್ತ ರೂ.9,00,000/–. ಆದರೆ ದೋಷಾರೋಪಣೆ ಅನುಬಂಧ–1ರ ಪ್ರಕಾರ ಒಟ್ಟು 2 ಕಾಮಗಾರಿಗಳು ಇದ್ದು, ಅವುಗಳ ಒಟ್ಟು ಮೊತ್ತ ರೂ.7,00,000/– ಗಳಾಗಿರುತ್ತದೆ. ದೂರುದಾರರ ಪ್ರಕಾರ 2 ಕಾಮಗಾರಿಗಳ ಬಗ್ಗೆ ಇದ್ದು ಅವುಗಳ ಒಟ್ಟು ಮೊತ್ತ ರೂ.7,00,000/– ಗಳಿರುತ್ತದೆ. ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2 ಕಾಮಗಾರಿಗಳ ಬಗ್ಗೆ ಹೇಳಿರುತ್ತಾರೆ. 1ನೇ ಕಾಮಗಾರಿ ಅಂದರೆ ಬಮ್ಮಶೆಟ್ಟಿಯ ಕೆರೆಯಿಂದ ಹೊಳು ತೆಗೆಯುವುದು ರೂ.1,50,000/– (ನಿ.ಪಿ.4) ಮತ್ತು 2ನೇ ಕಾಮಗಾರಿ ಅಂದರೆ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರಹಾಕುವುದು ಅಂದಾಜು ಮೊತ್ತ ರೂ.2,50,000/– (ನಿ.ಪಿ.5).

18. ಅಂದಾಜು ಪತ್ರಿಕೆಯಲ್ಲಿ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ, ತಾಂತ್ರಿಕ ಮಂಜೂರಾತಿ ಹಾಗೂ ಅಂದಾಜು ಪತ್ರಿಕೆಯನ್ನು ತಯಾರಿಸಿದವರು ಶ್ರೀ. ಆರ್.ಪಿ ದೇವಾಂಗದ, ಸಹಾಯಕ ಇಂಜಿನಿಯರ್ ರವರು ಇರುತ್ತಾರೆ ಅಂತಾ ನಮೂದು ಇರುತ್ತದೆ. ಅಂದಾಜು ಪತ್ರಿಕೆಯಲ್ಲಿ 2012–13ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಇಂಜಿನಿಯರಿಂಗ್ ಇಲಾಖೆ, ಧಾರವಾಡ ವೃತ್ತ, ಧಾರವಾಡ ಹಾಗೂ 2009–10ನೇ ಸಾಲಿನ ಸಣ್ಣ ನೀರಾವರಿ ಇಲಾಖೆ, ಬೆಳಗಾವಿ ವೃತ್ತ, ಬೆಳಗಾವಿ ಇವರ ದರಪಟ್ಟಿಗಳನ್ನು ಆಧಾರಿಸಿ ತಾಂತ್ರಿಕ ಮಂಜೂರಾತಿಗಾಗಿ ಸಲ್ಲಿಸಲಾಗಿರುತ್ತದೆ. ಸದರಿ ಅಂದಾಜು ಪತ್ರಿಕೆಗೆ ವಿಭಾಗ ಅಧಿಕಾರಿ, ಪಿ.ಆರ್.ಇ ಉಪ ವಿಭಾಗ ಹಾಗೂ ಸಹಾಯಕ

ಕಾರ್ಯನಿರ್ವಾಹಕ ಅಭಿಯಂತರರು, ಪಿ.ಆರ್.ಇ ಉಪ ವಿಭಾಗ ಇವರ ಸಹಿಗಳು ಇದ್ದು, ಆ.ಸ.ನೌ ರವರ ಸಹಿ ಇರುತ್ತದೆ. ಮೊದಲನೇ ಮತ್ತು ಕೊನೆಯ ಬಿಲ್ಲಿಗೆ ಸಂಬಂಧಪಟ್ಟಂತೆ ವಿಭಾಗ ಅಧಿಕಾರಿ, ಪಿ.ಆರ್.ಇ ಉಪ ವಿಭಾಗ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಿ.ಆರ್.ಇ ಉಪ ವಿಭಾಗ ಇವರುಗಳು ತಯಾರಿಸಿದ್ದು ಇದ್ದು the above measurements recorded by Sri. Devangada, AE-2 on 24/03/2013 in M.B. No.575 page No.38 and 39 and certified that the work has been executed satisfactorily ಅಂತಾ ನಮೂದು ಇರುತ್ತದೆ. ಇದಕ್ಕೆ ಗಳಗಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಆ.ಸ.ನೌ ಹಾಗೂ ಸಹಾಯಕ ನಿರ್ದೇಶಕರು, ಗ್ರಾಮೀಣ ಉದ್ಯೋಗ ತಾಲ್ಲೂಕು ಪಂಚಾಯಿಗಿ, ಕಲಘಟಗಿ ಇವರ ಸಹಿ ಇರುತ್ತದೆ. ಪಿ.ಡಬ್ಲ್ಯೂ.1 ರವರ ಪ್ರಕಾರ ಈ ಬಿಲ್ಲಿನಲ್ಲಿ ಶ್ರೀ. ಎಸ್.ಎನ್ ಮಾದಿಕ್ ಎಂಬ ಗುತ್ತಿಗೆದಾರರಿಗೆ ದಿನಾಂಕ: 28/01/2013 ರಂದು ಸಾಮಗ್ರಿಯನ್ನು ಖರೀದಿ ಮಾಡಲು ನಮೂದು ಇದ್ದು, ಅದಕ್ಕೆ ಸಂಬಂಧಪಟ್ಟಂತೆ ಅಳತೆ ಪುಸಕ್ತವನ್ನು ಹಾಜರುಪಡಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಆ.ಸ.ನೌ ರವರ ಪ್ರಕಾರ ಅಳತೆ ಪುಸ್ತಕವನ್ನು ಬರೆಯುವುದು ತನ್ನ ಕರ್ತವ್ಯವಾಗಿರಲಿಲ್ಲ ಅದನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬರೆಯುತ್ತಾರೆ, ಸದರಿ ದಾಖಲಾತಿಗಳು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹತ್ತಿರವಿದ್ದು ಅವರಿಂದ ಈ ವಿಚಾರಣೆಗಾಗಿ ತರಿಸಿಕೊಂಡಿರುವುದಿಲ್ಲ ಅಂತಾ ಹೇಳಿರುತ್ತಾರೆ. ನಿ.ಪಿ.4 ರಲ್ಲಿ 4 ಪುಟಗಳಿದ್ದು, ಲೆಕ್ಕ ಶೀರ್ಷಿಕೆ, ಅಂದಾಜು ಮೊತ್ತಿನ ಮುಖಪುಟ, ಅಂದಾಜು ಪತ್ರಿಕೆ ಹಾಗೂ ಮೊದಲನೇ ಮತ್ತು ಕೊನೆಯ ಬಿಲ್ಲು (first & final bill) ಒಳಗೊಂಡಿರುತ್ತದೆ. ಲೆಕ್ಕ ಶೀರ್ಷಿಕೆ, ಮುಖಪುಟ ಹಾಗೂ ಅಂದಾಜು ಪತ್ರಿಕೆಯನ್ನು ಪರಿಶೀಲಿಸಿದಾಗ, ಅಂದಾಜು ಮೊತ್ತ ರೂ.1,50,000/- ಗಳಿರುತ್ತದೆ. ಮೊದಲನೇ ಮತ್ತು ಕೊನೆಯ ಬಿಲ್ಲಿನಲ್ಲಿ ಸಾಮಗ್ರಿ ಪೂರೈಕೆ ಬಾಬ್ತು ಗುತ್ತಿಗೆದಾರರಿಂದ ಶ್ರೀ. ಎಸ್.ಎನ್ ಮಾದಿಕ್ ರವರಿಗೆ ರೂ.1,34,490/- (ರೂ.7,078/- ಗಳ ಶಾಸನಾತ್ಮಕ ಕಡಿತ ಹೊರತು ಪಡಿಸಿ) ಗಳನ್ನು ನೀಡಿರುವುದು ಬಿಲ್ಲಿನಲ್ಲಿ ನಮೂದಿಸಿದೆ. ಮುಂದುವರೆದು, ಅದೇ ಕಾಮಗಾರಿಗೆ ಸಂಬಂಧಪಟ್ಟಂತೆ ಇನ್ನೊಂದು ಮೊದಲನೇ ಮತ್ತು ಕೊನೆಯ ಬಿಲ್ಲನ್ನು ತಯಾರಿಸಿದ್ದು

(ನಿ.ಪಿ.10). ಸಾಮಗ್ರಿ ಪೂರೈಕೆ ಬಾಬ್ತು ಗುತ್ತಿಗೆದಾರರಿಂದ ಶ್ರೀ. ಎಸ್.ಎನ್ ಮಾದಿಕ್ ರವರಿಗೆ ರೂ.56,671/- (ರೂ.2,983/- ಗಳ ಶಾಸನಾತ್ಮಕ ಕಡಿತ ಹೊರತು ಪಡಿಸಿ) ಗಳನ್ನು ನೀಡಿರುವುದು ಬಿಲ್ಲಿನಲ್ಲಿ ನಮೂದಿಸಿದೆ.

19. ಪಿ.ಡಬ್ಲ್ಯೂ.1 ರವರ ಪ್ರಕಾರ ಈ ಪ್ರಕರಣವನ್ನು ಮೊದಲು ಈ ಸಂಸ್ಥೆಯ ತಾಂತ್ರಿಕ ವಿಭಾಗದವರಿಗೆ ತನಿಖೆಯನ್ನು ಕೈಗೊಳ್ಳುವ ಸಲುವಾಗಿ ಕಳುಹಿಸಿದ್ದು, ಅವರು ತನಿಖೆಯನ್ನು ನಡೆಸಿರುವುದಿಲ್ಲ ಮತ್ತು ವರದಿಯನ್ನು ಸಹ ನೀಡಿರುವುದಿಲ್ಲ ನಂತರದಲ್ಲಿ ಕಡತವನ್ನು ವಾಪಸ್ತು ಹಾಗೆ ಕಳುಹಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ಇವರು ಇದ್ದ ದಾಖಲಾತಿಗಳ ಮೇಲೆ ಅಂತಿಮ ಪರಿಶೀಲನಾ ಟಿಪ್ಪಣಿಯನ್ನು ತಯಾರಿಸಿರುತ್ತಾರೆ ಅಂತಾ ಹೇಳಿರುತ್ತಾರೆ. ನಿ.ಪಿ.4ರಲ್ಲಿ ಒಟ್ಟು 4 ಪುಟಗಳನ್ನು ನಿಶಾನೆಗೆ ಒಳಪಡಿಸಿದ್ದು, ಅದರಲ್ಲಿ ಮೊದಲನೇ ಮತ್ತು ಕೊನೆಯ ಬಿಲ್ಲು ಮೇಲೆ ಹೇಳಿದ ಹಾಗೆ ಇದ್ದು, ಅದೇ ಬಿಲ್ಲನ್ನೇ ಮತ್ತೆ ನಿ.ಪಿ.9 ಅಂತಾ ಗುರುತಿಸಲಾಗಿದ್ದು ಇರುತ್ತದೆ. ಮೇಲೆ ಹೇಳಿದ ಹಾಗೆ ಅಂದಾಜು ಪತ್ರಿಕೆಯ ಮತ್ತು ಮೊದಲನೇ ಮತ್ತು ಕೊನೆಯ ಬಿಲ್ಲುಗಳಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಿ.ಆರ್.ಇ ಉಪ ವಿಭಾಗ ಇವರ ಸಹಿಗಳು ಇರುತ್ತದೆ. ಆದರೆ ಇವರ ಕಡೆಯಿಂದ ಪಿ.ಡಬ್ಲ್ಯೂ.1 ರವರು ಯಾವುದೇ ದಾಖಲಾತಿಗಳನ್ನು ತರಿಸಿಕೊಂಡಿರುವುದಿಲ್ಲ. ಇವರಿಗೆ ದಾಖಲಾತಿಗಳನ್ನು ಸಲ್ಲಿಸಲು ಕೇಳಿದ್ದೇ ಆದರೆ ಅಂದಾಜು ಪತ್ರಿಕೆ ಮತ್ತು ಮೊದಲನೇ ಮತ್ತು ಕೊನೆಯ ಬಿಲ್ಲನು ಮತ್ತು ಅಳತೆ ಪುಸ್ತಕವನ್ನು ಯಾರು ಬರೆದಿರುತ್ತಾರೆ ಮತ್ತು ಗುತ್ತಿಗೆದಾರರಿಗೆ ಹಣವನ್ನು ಯಾರು ಸಂದಾಯ ಮಾಡಿರುತ್ತಾರೆ ಎನ್ನುವುದು ಗೊತ್ತಾಗುತಿತ್ತು. ಆ.ಸ.ನೌ ರವರ ಪ್ರಕಾರ ತಾನು ಕೇವಲ ಕ್ರಿಯಾ ಯೋಜನೆಯನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿರುತ್ತೇನೆ ಅಂತಾ ವಾದ ಇರುತ್ತದೆ.

20. ಅಲ್ಲದೇ, ಬಮ್ಮಶೆಟ್ಟಿ ಕೆರೆ ಹೊಳು ತೆಗೆಯುವ ಕಾಮಗಾರಿಗೆ ಸಂಬಂಧಿಸಿದಂತೆ ಮಸ್ಟರ್ ರೋಲ್ ಸಂಖ್ಯೆ 2170, 2661 ಮತ್ತು 3131 ಗಳಲ್ಲಿ ಕ್ರಮವಾಗಿ ರೂ.22,785/-, ರೂ.89,280/- ಮತ್ತು ರೂ.30,070/- ಗಳನ್ನು ಪಾವತಿಸಿದೆ. ಹೀಗೆ ಕೂಲಿ ಬಾಬ್ತು ಒಟ್ಟು ರೂ.1,42,135/-ಗಳನ್ನು

ಪಾವತಿಸಿದೆ. ಹೀಗೆ ಆ.ಸ.ನೌ ರವರು ಸಾಮಗ್ರಿಗಳ ಬಾಬ್ತು (ರೂ.1,34,490/- + ರೂ.56,671/-) ಒಟ್ಟು ರೂ.1,91,161/- ಹಾಗೂ ಕೂಲಿ ಬಾಬ್ತು ರೂ.1,42,135/- ಒಟ್ಟು ರೂ.3,33,296/- ಗಳ ದುರುಪಯೋಗ ಪಡಿಸಿರುತ್ತಾರೆ ಅಂತಾ ದೋಷಾರೋಪಣೆ ಇರುತ್ತದೆ. ಈ ಮೊದಲನೇ ಕಾಮಗಾರಿಗೆ ಸಂಬಂಧಪಟ್ಟಂತೆ ಮಸ್ಟರ್ ರೋಲ್‌ನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಪಿ.6 ರಿಂದ 8 ಎಂದು ಗುರುತಿಸಲಾಗಿದ್ದು ಅವುಗಳಲ್ಲಿ ಕೂಲಿ ಕಾರ್ಮಿಕರ ಹಿರಿಯ ವ್ಯಕ್ತಿಯ ಹೆಸರು ಇದ್ದು ಮತ್ತು ಅವರ ಕುಟುಂಬ ಸದಸ್ಯರ ಹೆಸರುಗಳಿದ್ದು, ಹಿರಿಯ ವ್ಯಕ್ತಿಯ ಆಧಾರ ನಂಬರ್ ಇದ್ದು ಮತ್ತು ಆತನ ಖಾತೆಗೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ಗೆ ಸಂದಾಯವಾಗಿರುತ್ತದೆ ಅಂತಾ ಕಂಡುಬರುತ್ತದೆ. ಪಿ.ಡಬ್ಲ್ಯೂ.1 ರವರ ಪ್ರಕಾರ ಕೂಲಿ ಕಾರ್ಮಿಕರ ಖಾತೆಗಳಿಗೆ ಹಣ ಜಮಾ ಆದ ದಾಖಲಾತಿಗಳು ಇರುವುದಿಲ್ಲ ಮತ್ತು ಕೂಲಿ ಕಾರ್ಮಿಕರು ಬ್ಯಾಂಕ್ ಖಾತೆಗಳು ಹೊಂದಿದ ಬಗ್ಗೆ ದಾಖಲಾತಿಗಳು ಇರುವುದಿಲ್ಲ ಹಾಗೂ ಜಾಬ್ ಕಾರ್ಡಿನ ಪ್ರತಿಗಳು ಇರುವುದಿಲ್ಲ ಅಂತಾ ಹೇಳಿರುತ್ತಾರೆ. ಆದರೆ ನಿ.ಪಿ.6 ರಿಂದ 8 ಇವುಗಳನ್ನು ಪರಿಶೀಲಿಸಿದಾಗ, ಮೇಲೆ ಹೇಳಿದ ಹಾಗೆ ಹಿರಿಯ ವ್ಯಕ್ತಿಯ ಮತ್ತು ಅವರ ಕುಟುಂಬ ಸದಸ್ಯರಿಗೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಲ್ಲಿ ಹಣ ಸಂದಾಯವಾಗಿದ್ದು ಕಂಡುಬರುತ್ತದೆ. ನಿ.ಪಿ.4ರ ಪ್ರಕಾರ ಬಮ್ಮಶೆಟ್ಟಿ ಕೆರೆ ಹೊಳು ತೆಗೆಯುವುದು ಕೇವಲ ರೂ.1,50,000/-ಗಳ ಹಣ ಮಂಜೂರಾಗಿರುತ್ತದೆ, ಆದರೆ ಶಿಸ್ತು ಪ್ರಾಧಿಕಾರದ ಪ್ರಕಾರ ಆ.ಸ.ನೌ ರವರು ರೂ.3,33,296/-ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಅಂತಾ ವಾದ ಇರುತ್ತದೆ. ಆದರೆ, ಬಿಡುಗಡೆಯಾದ ಹಣಕ್ಕೂ ಹಾಗೂ ದುರುಪಯೋಗ ಪಡಿಸಿಕೊಂಡ ಹಣಕ್ಕೂ ಅಂಕಿ ಅಂಶಗಳ ವ್ಯತ್ಯಾಸ ಇರುತ್ತದೆ. ಅಂದಾಜು ಮೊತ್ತಕ್ಕಿಂತ ಹೆಚ್ಚಿನ ಹಣವನ್ನು ಹೇಗೆ ವಿನಿಯೋಗಿಸಿರುತ್ತಾರೆ ಅಂತಾ ಅರ್ಥವಾಗಿರುವುದಿಲ್ಲ.

21. ದೋಷಾರೋಪಣೆ ಅನುಬಂಧ-1ರ ಪ್ರಕಾರ ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರಹಾಕುವುದು ಅಂದಾಜು ಮೊತ್ತು ರೂ.5 ಲಕ್ಷ. ಈ ಕಾಮಗಾರಿಯಲ್ಲಿ ರೂ.2,38,961/-ಗಳ ಹಣ ದುರ್ಬಳಕೆಯಾಗಿರುತ್ತದೆ ಅಂತಾ ನಮೂದು ಇರುತ್ತದೆ. ದೋಷಾರೋಪಣೆ ಅನುಬಂಧ-2ರ ಪ್ರಕಾರ ಗಳಗಿ ಗ್ರಾಮದ ವಡ್ಡರ ಓಣಿಯಿಂದ

ಸಿದ್ರಾಮೇಶ್ವರ ದೇವಸ್ಥಾನದವರೆಗೆ ನಿಂತ ನೀರನ್ನು ಹೊರಹಾಕುವುದು ಅಂದಾಜು ಮೊತ್ತ ರೂ.2.5 ಲಕ್ಷ. ಇದರಲ್ಲಿ ಸಾಮಗ್ರಿ ರೂಪದಲ್ಲಿ ರೂ.1 ಲಕ್ಷ, ಅಕುಷಲ ಕಾರ್ಮಿಕರ ಕೂಲಿ ರೂ.1.5 ಲಕ್ಷ. ಗಳಗಿ ಗ್ರಾಮದ ವಡ್ಡರ ಓಣಿಯಿಂದ ಸಿದ್ರಾಮೇಶ್ವರ ಮಠದವರೆಗೆ ನಿಂತ ನೀರನ್ನು ಹೊರಹಾಕುವುದು ಅಂದಾಜು ಮೊತ್ತ ರೂ.5 ಲಕ್ಷ. ಇದರಲ್ಲಿ ಸಾಮಗ್ರಿ ರೂಪದಲ್ಲಿ ರೂ.2 ಲಕ್ಷ, ಅಕುಷಲ ಕಾರ್ಮಿಕರ ಕೂಲಿ ರೂ.3 ಲಕ್ಷ. ಈ ಕಾಮಗಾರಿಗಳಿಗೆ ಒಟ್ಟು ಮೊತ್ತ ರೂ.5,00,000/- + ರೂ.2,50,000/- ಅಂತಾ ನಮೂದು ಇರುತ್ತದೆ. ಈ ಕಾಮಗಾರಿಗೆ ಸಂಬಂಧಪಟ್ಟಂತೆ ಮಸ್ಟರ್ ರೋಲ್ ಸಂಖ್ಯೆ 2413, 2673, 3750, 5419 ಮತ್ತು 3028 ಗಳಲ್ಲಿ ಕ್ರಮವಾಗಿ ರೂ.55,800/-, ರೂ.53,940/-, ರೂ.46,500/-, ರೂ.36,270/- ಮತ್ತು ರೂ.37,540/- ಗಳನ್ನು ಪಾವತಿಸಿದೆ. ಹೀಗೆ ಕೂಲಿ ಬಾಬ್ತು ಒಟ್ಟು ರೂ.2,30,020/-ಗಳನ್ನು ಪಾವತಿಸಿದೆ. ಈ ಕಾಮಗಾರಿಯ ಸಾಮಗ್ರಿಗಳ ಕುರಿತು ಮೊದಲನೇ ಮತ್ತು ಕೊನೆಯ ಬಿಲ್ಲುಗಳ ವಿವರಗಳ ಪ್ರಕಾರ ಗುತ್ತಿಗೆದಾರರಾದ ಶ್ರೀ. ಶಿವ ಮೆಟಿರೀಯಲ್ಸ್ ಸಪ್ಲೈಯರ್ ಇವರಿಗೆ ರೂ.2,22,232/- (ರೂ.16,727/-ಗಳ ಶಾಸನಾತ್ಮಕ ಕಡಿತಗಳನ್ನು ಹೊರತುಪಡಿಸಿ) ಸಿಮೆಂಟ್‌ಗಳನ್ನು ಪೂರೈಸಲು, ಲೋಡಿಂಗ್ ಮತ್ತು ಅನ್-ಲೋಡಿಂಗ್, ಕಾಮಗಾರಿಯ ಸ್ಥಳಕ್ಕೆ ಮೊರಂ ಪೂರೈಕೆಗೆ ವಿನಿಯೋಗಿಸಿರುತ್ತಾರೆ ಅಂತಾ ನಿ.ಪಿ.16 ರಲ್ಲಿ ನಮೂದು ಆಗಿರುತ್ತದೆ. ಅದರಂತೆ ಸದರಿ ಗುತ್ತಿಗೆದಾರರಿಗೆ ಮೊದಲನೇ ಮತ್ತು ಕೊನೆಯ ಬಿಲ್ಲಿನಲ್ಲಿ ಸಿಮೆಂಟ್ ಬ್ಯಾಗ್‌ಗಳನ್ನು ಪೂರೈಸಿದ ಬಗ್ಗೆ ಲೋಡಿಂಗ್ ಮತ್ತು ಅನ್-ಲೋಡಿಂಗ್, ಕಾಮಗಾರಿಯ ಸ್ಥಳಕ್ಕೆ ಮೊರಂ ಪೂರೈಕೆಗೆ ವಿನಿಯೋಗಿಸಿರುತ್ತಾರೆ ಅಂತಾ ನಿ.ಪಿ.19 ರಲ್ಲಿ ನಮೂದು ಆಗಿರುತ್ತದೆ. ಇದರ ಒಟ್ಟು ಮೊತ್ತ ರೂ.1,21,816/- ಗಳನ್ನು (ರೂ.7,051/-ಗಳ ಶಾಸನಾತ್ಮಕ ಕಡಿತಗಳನ್ನು ಹೊರತುಪಡಿಸಿ) ನೀಡಿರುತ್ತಾರೆ ಅಂತಾ ನಮೂದು ಇರುತ್ತದೆ. ಅದರಂತೆ ಸದರಿ ಗುತ್ತಿಗೆದಾರರು ಮೊದಲನೇ ಮತ್ತು ಕೊನೆಯ ಬಿಲ್ಲಿಗೆ ಅದೇ ಕಾಮಗಾರಿಯ ಸಾಮಗ್ರಿ ಪೂರೈಕೆರೆ ಸಂಬಂಧಿಸಿದ ಇನ್ನೊಂದು ಮೊದಲನೇ ಮತ್ತು ಅಂತಿಮ ಬಿಲ್ಲಿನ ವಿವರಗಳು ಈ ಕೆಳಗಿನಂತಿದೆ -

| Sl. No. | Item of work | Quantity | Unit | Rate | Amount |
|---|---|---|---|---|---|
| 1 | Supplying & conveyance of 40 mm & down size graded granite metal for | 7.80 Cubic Mtr. | -- | 770.00 | 6006 |

| | | | | | |
|---|---|---|---|---|---|
| | bed | | | | |
| 2 | Supplying & conveyance of 20 mm & down size graded granite metal for coping | 43.47 Cubic Mtr. | -- | 1135.00 | 49338 |
| 3 | Supplying & conveyance of Fine sand for coping slab & plastering | 40.57 Cubic Mtr. | -- | 316.00 | 12820 |
| 4 | Supplying & conveyance of Uncorsed rubble stone of granite /trap/Basalt masonary in foundation | 38.12 Cubic Mtr. | -- | 1100.00 | 41932 |
| TOTAL | | | | | 110096 |

ಈ ಬಗ್ಗೆ ನಿ.ಪಿ.18ರಲ್ಲಿ ನಮೂದು ಆಗಿರುತ್ತದೆ. ಸಾಮಗ್ರಿ ಪೂರೈಕೆ ಬಾಬ್ತು ಗುತ್ತಿಗೆದಾರರು ಶ್ರೀ. ಶಿವ ಮೆಟಿರೀಯಲ್ಸ್ ಸಪ್ಲೈಯರ್ ಇವರಿಗೆ ರೂ.97,654/- ಗಳನ್ನು (ರೂ.12,442/-ಗಳ ಶಾಸನಾತ್ಮಕ ಕಡಿತಗಳನ್ನು ಹೊರತುಪಡಿಸಿ) ನೀಡಿರುವುದು ಬಿಲ್ಲಿನಲ್ಲಿ ನಮೂದಿಸಿದೆ. ಹೀಗೆ ಈ ಕಾಮಗಾರಿಗೆ ಒಟ್ಟು ಸಾಮಗ್ರಿ ಖರ್ಚು (ರೂ.1,21,814/- + ರೂ.97,654/-) ಒಟ್ಟು ರೂ.2,19,468/- ಹಾಗೂ ಕೂಲಿ ಕಾರ್ಮಿಕರಿಗೆ ರೂ.2,30,020/- ಒಟ್ಟು ರೂ.4,49,488/-ಗಳ ಹಣ ದುರುಪಯೋಗವಾಗಿರುತ್ತದೆ ಅಂತಾ ನಮೂದು ಇರುತ್ತದೆ.

22.ಈ ಕಾಮಗಾರಿಗೆ ಸಂಬಂಧಪಟ್ಟಂತೆ ನಿ.ಪಿ.11ನ್ನು ಹಾಜರುಪಡಿಸಿದ್ದು ಇದರಲ್ಲಿ ಮಸ್ಟರ್ ರೋಲ್ (ಅಕುಷಲ ಕಾರ್ಮಿಕರು) ಕುಟುಂಬ ಮುಖ್ಯಸ್ಥರ ಹೆಸರು, ಬ್ಯಾಂಕ್ ಖಾತೆ ನಂಬರ್, ದಿನವಹಿ ಹಾಜರಾತಿ ಪುಸ್ತಕ ಮತ್ತು ಅವರ ಸಹಿಗಳು ಇರುತ್ತವೆ. ಅದೇ ರೀತಿ ಈ ಕಾಮಗಾರಿಗೆ ಸಂಬಂಧಪಟ್ಟಂತೆ ನಿ.ಪಿ.12 ರಿಂದ 15 ಎಂದು ಗುರುತಿಸಲಾಗಿರುತ್ತದೆ. ಇವುಗಳು ಸಹ ಮಸ್ಟರ್ ರೋಲ್‌ಗಳಿದ್ದು, ಇವುಗಳಲ್ಲಿಯೂ ಸಹ ಕೂಲಿ ಕಾರ್ಮಿಕರ ಹಿರಿಯ ವ್ಯಕ್ತಿಯ ಹೆಸರು ಇದ್ದು ಮತ್ತು ಅವರ ಕುಟುಂಬ ಸದಸ್ಯರ ಹೆಸರುಗಳಿದ್ದು, ಕೆಲವೊಂದು ಹಿರಿಯ ವ್ಯಕ್ತಿಯ ಆಧಾರ್ ನಂಬರ್ ಇದ್ದು ಮತ್ತು ಅವರ ಖಾತೆಗೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ಗೆ ಸಂದಾಯವಾಗಿರುತ್ತದೆ ಅಂತಾ ಕಂಡುಬರುತ್ತದೆ. ಪಿ.ಡಬ್ಲ್ಯೂ.1 ರವರ ಪ್ರಕಾರ ಕೂಲಿ

ಕಾರ್ಮಿಕರ ಖಾತೆಗಳಿಗೆ ಹಣ ಜಮಾ ಆದ ದಾಖಲಾತಿಗಳು ಇರುವುದಿಲ್ಲ ಮತ್ತು ಕೂಲಿ ಕಾರ್ಮಿಕರು ಬ್ಯಾಂಕ್ ಖಾತೆಗಳು ಹೊಂದಿದ ಬಗ್ಗೆ ದಾಖಲಾತಿಗಳು ಇರುವುದಿಲ್ಲ ಹಾಗೂ ಜಾಬ್ ಕಾರ್ಡಿನ ಪ್ರತಿಗಳು ಇರುವುದಿಲ್ಲ ಅಂತಾ ಹೇಳಿರುತ್ತಾರೆ. ಆದರೆ ನಿ.ಪಿ.12 ರಿಂದ 15 ಇವುಗಳನ್ನು ಪರಿಶೀಲಿಸಿದಾಗ, ಮೇಲೆ ಹೇಳಿದ ಹಾಗೆ ಓರಿಯ ವ್ಯಕ್ತಿಯ ಮತ್ತು ಅವರ ಕುಟುಂಬ ಸದಸ್ಯರಿಗೆ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್‌ನಲ್ಲಿ ಹಣ ಸಂದಾಯವಾಗಿದ್ದು ಕಂಡುಬರುತ್ತದೆ.

23. ಮೊದಲನೇ ಮತ್ತು ಕೊನೆಯ ಬಿಲ್ಲಿಗೆ ಸಂಬಂಧಪಟ್ಟಂತೆ ವಿಭಾಗ ಅಧಿಕಾರಿ, ಪಿ.ಆರ್.ಇ ಉಪ ವಿಭಾಗ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಿ.ಆರ್.ಇ ಉಪ ವಿಭಾಗ ಇವರುಗಳು ತಯಾರಿಸಿದ್ದು ಇದ್ದು the above measurements recorded by Sri. Devangada, AE-2 on 24/03/2013 in M.B. No.811 page No.82 and 84 and certified that the work has been executed satisfactorily ಅಂತಾ ನಮೂದು ಇರುತ್ತದೆ. ಇದಕ್ಕೆ ಗಳಗಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಆ.ಸ.ನೌ ಹಾಗೂ ಸಹಾಯಕ ನಿರ್ದೇಶಕರು, ಗ್ರಾಮೀಣ ಉದ್ಯೋಗ ತಾಲ್ಲೂಕು ಪಂಚಾಯತ್, ಕಲಘಟಗಿ ಇವರ ಸಹಿ ಇರುತ್ತದೆ. ಪಿ.ಡಬ್ಲ್ಯೂ.1 ರವರ ಪ್ರಕಾರ ಈ ಬಿಲ್ಲಿನಲ್ಲಿ ಶ್ರೀ. ಶಿವ ಮೆಟಿರಿಯಲ್ಸ್ ಸಪ್ಲೈಯರ್ ಎಂಬ ಗುತ್ತಿಗೆದಾರರಿಗೆ ದಿನಾಂಕ: 17/02/2013 ರಂದು ಸಾಮಗ್ರಿಯನ್ನು ಖರೀದಿ ಮಾಡಲು ನಮೂದು ಇರುತ್ತದೆ ಇದನ್ನು ನಿ.ಪಿ.16 ಎಂದು ಗುರುತಿಸಿಕೊಂಡಿರುತ್ತಾರೆ (ನಿ.ಪಿ.16 ಮತ್ತು ನಿ.ಪಿ.21 ಒಂದೇ ಆಗಿರುತ್ತದೆ). ನಿ.ಪಿ.18 ಮತ್ತು ನಿ.ಪಿ.19 ಇವುಗಳು ಸಹ ಶ್ರೀ. ಶಿವ ಮೆಟಿರಿಯಲ್ಸ್ ಸಪ್ಲೈಯರ್‌ಗೆ ಸಾಮಗ್ರಿಗಳನ್ನು ಖರೀದಿಸಲು ಹಣ ಮಂಜೂರಾಗಿದ್ದು ಇರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಅಳತೆ ಪುಸಕ್ತವನ್ನು ಹಾಜರುಪಡಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಆ.ಸ.ನೌ ರವರ ಪ್ರಕಾರ ಅಳತೆ ಪುಸ್ತಕವನ್ನು ಬರೆಯುವುದು ತನ್ನ ಕರ್ತವ್ಯವಾಗಿರಲಿಲ್ಲ ಅದನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬರೆಯುತ್ತಾರೆ, ಸದರಿ ದಾಖಲಾತಿಗಳನ್ನು ಅವರ ಹತ್ತಿರವಿದ್ದು ಅವರಿಂದ ಈ ವಿಚಾರಣೆಗಾಗಿ ತರಿಸಿಕೊಂಡಿರುವುದಿಲ್ಲ ಅಂತಾ

ಹೇಳಿರುತ್ತಾರೆ. ಪಿ.ಡಬ್ಲ್ಯೂ.1 ರವರು ಮೇಲೆ ಹೇಳಿದ ಅಧಿಕಾರಿಗಳಿಂದ ದಾಖಲಾತಿಗಳನ್ನು ಸಲ್ಲಿಸಲು ಕೇಳಿದ್ದೇ ಆದರೆ ಅಂದಾಜು ಪತ್ರಿಕೆ ಮತ್ತು ಮೊದಲನೇ ಮತ್ತು ಕೊನೆಯ ಬಿಲ್ಲನು ಮತ್ತು ಅಳತೆ ಪುಸ್ತಕವನ್ನು ಯಾರು ಬರೆದಿರುತ್ತಾರೆ ಮತ್ತು ಗುತ್ತಿಗೆದಾರರಿಗೆ ಹಣವನ್ನು ಯಾರು ಸಂದಾಯ ಮಾಡಿರುತ್ತಾರೆ ಎನ್ನುವುದು ಗೊತ್ತಾಗುತಿತ್ತು. ಆ.ಸ.ನೌ ರವರ ಪ್ರಕಾರ ತಾನು ಕೇವಲ ಕ್ರಿಯಾ ಯೋಜನೆಯನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿರುತ್ತೇನೆ ಅಂತಾ ವಾದ ಇರುತ್ತದೆ. ನಿ.ಪಿ.16, ನಿ.ಪಿ.18 ಮತ್ತು ನಿ.ಪಿ.19 ಕ್ಕೆ ಸಂಬಂಧಪಟ್ಟಂತೆ ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಗುತ್ತಿಗೆದಾರರಿಂದ ನೀಡಲ್ಪಟ್ಟ ಕ್ಯಾಷ್ ಕ್ರೆಡಿಟ್ ಬಿಲ್; ಟಾಕ್ಸ್ ಇನ್ವಾಸ್ ಮುಂತಾದ ದಾಖಲತಿಗಳು ಲಭ್ಯವಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆ.ಸ.ನೌ ರವರ ಪ್ರಕಾರ ಈ ದಾಖಲಾತಿಗಳು ಸಹಾಯಕ ಕಾರ್ಯಪಾಲಕ ಅಭಿಯಂತರರ ಹತ್ತಿರ ಇರುತ್ತವೆ ತಮ್ಮ ಬಳಿಯಲ್ಲಿ ಇರುವುದಿಲ್ಲ ಅಂತಾ ಹೇಳಿರುತ್ತಾರೆ. ಮೇಲಿನ ಬಿಲ್ಲುಗಳಿಗೆ ಶ್ರೀ. ದೇವಾಂಗದ, ಎ.ಇ-2 ಇವರು ಬರೆದಿದ್ದು ಇದ್ದು ಅವರು ಅದಕ್ಕೆ ಸಹಿ ಮಾಡಿದ್ದು ಅಲ್ಲದೇ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಕಲಘಟಗಿ ಮತ್ತು ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತ್ ಇವರು ಸಹ ಸಹಿ ಮಾಡಿರುತ್ತಾರೆ. ಅಲ್ಲದೇ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಆ.ಸ.ನೌ ರವರು ಸಹಿ ಮಾಡಿರುತ್ತಾರೆ. ಇದರಲ್ಲಿ ಮೇಲೆ ಹೇಳಿದ ಅಧಿಕಾರಿಗಳು ಸಹಿ ಮಾಡಿದ್ದರಿಂದ ಅವರನ್ನು ಸಹ ಈ ಪ್ರಕರಣದಲ್ಲಿ ಎದುರುದಾರರೆಂದು ಸೇರ್ಪಡಿಸಿಕೊಂಡು ಅವರಿಂದ ಆಕ್ಷೇಪಣೆಯನ್ನು ಕೇಳಿದ್ದೇ ಆಗಿದ್ದರೆ ಈ ಬಿಲ್ಲುಗಳನ್ನು ಯಾರು ತಯಾರಿಸಿರುತ್ತಾರೆ ಮತ್ತು ಯಾವ ಆಧಾರದ ಮೇಲೆ ತಯಾರಿಸಿರುತ್ತಾರೆ ಅಂತಾ ಗೊತ್ತಾಗುತಿತ್ತು. ಈ ಕಾಮಗಾರಿಗೆ ಸಂಬಂಧಪಟ್ಟಂತೆ ಅಂದಾಜು ಪುಸ್ತಕ ಹಾಜರುಪಡಿಸಿದ್ದು ಪಿ.ಡಬ್ಲ್ಯೂ.1 ರವರ ಪ್ರಕಾರ ಆ.ಸ.ನೌರವರು ಅಳತೆಯನ್ನು ದಾಖಲಿಸಿದ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದು ಇರುವುದಿಲ್ಲ ಅಂತಾ ಹೇಳಿರುತ್ತಾರೆ. ನಿ.ಪಿ.17ನ್ನು ಪರಿಶೀಲಿಸಿದಾಗ ಅದರಲ್ಲಿ ಡೇಟ್ ಆಫ್ ರೆಕಾರ್ಡಿಂಗ್ ಇರುತ್ತದೆ ಮತ್ತು ಅದರ ದಿನಾಂಕ: 22/03/2013 ಇರುತ್ತದೆ. ಅದಕ್ಕೆ ಆ.ಸ.ನೌ ರವರನ್ನು ಹೊರತುಪಡಿಸಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಸಹಿ ಇರುತ್ತದೆ ಅಂತಾ ಕಂಡುಬರುತ್ತದೆ.

24.ಪಿ.ಡಬ್ಲ್ಯೂ.1 ಇವರು ಕೂಲಿ ಕಾರ್ಮಿಕರು ಉದ್ಯೋಗ ಕೋರಿ ಪಂಚಾಯಿತಿಗೆ ನೀಡಲಾದ ಅರ್ಜಿಗಳಲ್ಲಿ ದಿನಾಂಕ ಮತ್ತು ಸಹಿ ಇರುವುದಿಲ್ಲ, ಸದರಿ ದಾಖಲಾತಿಯನ್ನು ನಿ.ಪಿ.21 ಅಂತಾ ಗುರುತಿಸಲಾಗಿದ್ದು, ಅದರಲ್ಲಿ 16 ಪುಟಗಳು ಇರುತ್ತದೆ. ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ, ಅದರಲ್ಲಿ ಪ್ರತಿಯೊಬ್ಬ ಕೂಲಿ ಕಾರ್ಮಿಕರು ಪ್ರತ್ಯೇಕವಾಗಿ ಸಲ್ಲಿಸಿದ ಅರ್ಜಿಗಳು ಇರುವುದಿಲ್ಲ, ಅದರಲ್ಲಿ 24 ಜನ ವ್ಯಕ್ತಿಗಳ ಹೆಸರು ಇರುತ್ತವೆ. ಅಲ್ಲದೇ, ಅವುಗಳಲ್ಲಿ ಅವರ ಉದ್ಯೋಗ ಚೀಟಿಯ ಸಂಖ್ಯೆ ಮತ್ತು ವೈಯಕ್ತಿಕ ಸಂಖ್ಯೆಯನ್ನು ನಮೂದಿಸಿದ್ದು ಇರುತ್ತದೆ. ಆದ್ದರಿಂದ, ಪ್ರತಿಯೊಬ್ಬ ಕೂಲಿ ಕಾರ್ಮಿಕರ ಪ್ರತ್ಯೇಕವಾದ ಅರ್ಜಿ ಇದಿದ್ದೇ ಆದರೆ ಅವರ ಸಹಿ ಇರುತ್ತದೆಯೇ ಅಥವಾ ಇಲ್ಲವೇ ಅಂತಾ ಪರಿಶೀಲಿಸಬಹುದಾಗಿತ್ತು.

25.ಆ.ಸ.ನೌ ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಅವರು ನಿ.ಡಿ.1 ರಿಂದ ನಿ.ಡಿ.6 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಎರಡೂ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕ್ರಿಯಾ ಯೋಜನೆಗಳು ಸಾಮಾನ್ಯ ಸಭೆಯಲ್ಲಿಟ್ಟು ತಯಾರಿಸಿದ್ದು ಅನುಮೋದನೆಗಾಗಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ, ಕಲಘಟಗಿ ಇವರಿಗೆ ಕಳುಹಿಸಿಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ. ನಂತರ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಅಭಿಯಂತರರು, ತಾಲ್ಲೂಕು ಪಂಚಾಯತಿ, ಕಲಘಟಗಿ ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿರುತ್ತಾರೆ. ಅವರಿಬ್ಬರು ಸ್ಥಳಕ್ಕೆ ಭೇಟಿ ನೀಡಿ ಮತ್ತು ತಾಂತ್ರಿಕ ಸಹಾಯಕರು ಇರುವುದರಿಂದ ಸದರಿ ಕಾಮಗಾರಿಯ ಅಂದಾಜು ಎಷ್ಟು ಆಗಿತ್ತದೆ ಅಂತಾ ಅವರೇ ನಿರ್ಧರಿಸುತ್ತಾರೆ. ನಂತರ ಅವರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಧಾರವಾಡ ರವರಿಗೆ ಕಳುಹಿಸಿ ಕೊಟ್ಟಿದ್ದು, ಅದು ಅನುಮೋದನೆ ಆದ ನಂತರ ಗಳಗೆ ಗ್ರಾಮ ಪಂಚಾಯಿತಿಗೆ ಕಳುಹಿಸಿ ಕೊಟ್ಟಿರುತ್ತಾರೆ ಅಂತಾ ನುಡಿದಿರುತ್ತಾರೆ. ಸದರಿ ಎಂ.ಜಿ.ಎನ್.ಆರ್.ಇ.ಜಿ. ಯೋಜನೆಯಲ್ಲಿ ಇರುವುದರಿಂದ ಇದಕ್ಕೆ ಗುತ್ತಿಗೆಗೆ ಕೊಡಲು ಬರುವುದಿಲ್ಲ, ಶೇ.60% ಕೂಲಿಕಾರರಿಗಾಗಿ ಮತ್ತು ಶೇ.40% ಸಾಮಗ್ರಿಗಳನ್ನು ಖರೀದಿ ಮಾಡಲು ವಿನಿಯೋಗಿಸಬೇಕಾಗುತ್ತದೆ. ಮುಂದುವರೆದು, ಈ ಕೂಲಿಕಾರರ ಕಾಮಗಾರಿಯನ್ನು ನೋಡಿಕೊಳ್ಳಲು 20 ಕೂಲಿಕಾರರಿಗೆ ಒಬ್ಬ ಉದ್ಯೋಗ ಮಿತ್ರ ಎಂದು ನೇಮಿಸಿರುತ್ತಾರೆ. ಈ

ಕೂಲಿ ಕಾರ್ಮಿಕರಿಗೆ ಜಾಬ್ ಕಾರ್ಡ್‌ನ್ನು ಕೊಡುತ್ತಾರೆ ಮತ್ತು ಜಾಬ್ ಕಾರ್ಡ್ ಕೊಟ್ಟವರಿಗೆ ಸ್ಥಳೀಯ ಗ್ರಾಮೀಣ ವಿಕಾಸ ಬ್ಯಾಂಕಿನಲ್ಲಿ ಅವರ ಖಾತೆ ಕಡ್ಡಾಯವಾಗಿ ಇರಬೇಕಾಗುತ್ತದೆ. ಸದರಿ ಉದ್ಯೋಗ ಮಿತ್ರನು ತನ್ನ ಕೈ ಕೆಳಗೆ ಕೆಲಸ ಮಾಡುವ ಕೂಲಿಕಾರರ ಹೆಸರನ್ನು ಮತ್ತು ಅವರ ಹಾಜರಾತಿಯನ್ನು ದಾಖಲಿಸುವ ಕೆಲಸ ಇರುತ್ತದೆ. ಜಾಬ್ ಕಾರ್ಡ್‌ನ್ನು ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿ ನೀಡಿರುತ್ತಾರೆ, ಅವರ ಕುಟುಂಬದ ವತಿಯಿಂದ ಆತನ ಕುಟುಂಬದ ಸದಸ್ಯರು ಕೆಲಸಕ್ಕೆ ಬರಬಹುದು. ಈ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ಕೆಲಸಕ್ಕೆ ಬಂದವರ ಹೆಸರನ್ನು ಉದ್ಯೋಗ ಮಿತ್ರನೇ ದಾಖಲೆ ಮಾಡಿಕೊಳ್ಳಬೇಕಾಗುತ್ತದೆ. ಮುಂದುವರೆದು, ಸದರಿ ಉದ್ಯೋಗ ಮಿತ್ರನು ಪ್ರತಿ ವಾರಕ್ಕೊಮ್ಮೆ ಪಂಚಾಯಿತಿಗೆ ಬಂದು ಎಷ್ಟು ಜನ ಕೆಲಸಕ್ಕೆ ಬಂದಿರುತ್ತಾರೆ ಎನ್ನುವ ಮಾಹಿತಿಯನ್ನು ನೀಡಿದ ನಂತರ ಪಂಚಾಯಿತಿಯಲ್ಲಿದ್ದ ಎನ್.ಎಂ.ಆರ್ ನೋಡಿ ನಂತರ ಸಂಬಂಧಪಟ್ಟ ಕೂಲಿ ಕಾರ್ಮಿಕರ ಬ್ಯಾಂಕ್ ಖಾತೆಗೆ ಹಣವನ್ನು ಆನ್‌ಲೈನ್ ಮುಖಾಂತರ ಜಮೆ ಮಾಡುತ್ತೇವೆ ಅಂತಾ ಹೇಳಿರುತ್ತಾರೆ. ಮುಂದುವರೆದು, ಈ ಪ್ರಕಾರ ಕೆಲಸಕ್ಕೆ ಬಂದ ವ್ಯಕ್ತಿಯ ಕುಟುಂಬದ ಮುಖ್ಯಸ್ಥನ ಹೆಸರಿನಲ್ಲಿ ಅವರ ಬ್ಯಾಂಕಿನ ಖಾತೆಗೆ ಹಣವನ್ನು ಜಮ ಮಾಡಲಾಗುತ್ತದೆ ಮತ್ತು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕುಟುಂಬದ ಮುಖ್ಯಸ್ಥರ ಹೆಸರಿನಲ್ಲಿ ಹಣ ಜಮ ಆಗಿರುತ್ತೆ, ನಂತರ ಸಂಬಂಧಪಟ್ಟ ಕೂಲಿ ಕಾರ್ಮಿಕರು ಯಾರಿಗೆ ಹಣ ಮುಟ್ಟಿರುತ್ತದೆ ಆತನು ಬಂದು ತಮ್ಮಲ್ಲಿದ್ದ ರಿಜಿಸ್ಟರ್‌ನಲ್ಲಿ ಸಹಿ ಮಾಡಿರುತ್ತಾರೆ. ಈಗಾಗಲೇ ದಾಖಲಾತಿಯನ್ನು ಸಲ್ಲಿಸಲಾಗಿದ್ದು, ಅದನ್ನು ನಿ.ಪಿ.11 ಎಂದು ಗುರುತಿಸಲಾಗಿರುತ್ತದೆ. ನಿ.ಪಿ.11 ಇದು ಎರಡನೇ ಕಾಮಗಾರಿಗೆ ಸಂಬಂಧಿಸಿದ್ದು ಇರುತ್ತದೆ.

26.ಪಿ.ಡಬ್ಲ್ಯೂ.1 ರವರ ಪ್ರಕಾರ ಆ.ಸ.ನೌ ರವರು ಮತ್ತು ಪಂಚಾಯಿತಿಯ ಅಧ್ಯಕ್ಷರು ರೂ.7,82,784/–ಗಳ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಆದರೆ ಮೊದಲನೇ ಮತ್ತು ಕೊನೆಯ ಬಿಲ್ಲುಗಳಿಗೆ ಮೇಲೆ ಹೇಳಿದ ಹಾಗೆ ಗಳಗಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಆ.ಸ.ನೌ ಹಾಗೂ ಸಹಾಯಕ ನಿರ್ದೇಶಕರು, ಗ್ರಾಮೀಣ ಉದ್ಯೋಗ ತಾಲ್ಲೂಕು ಪಂಚಾಯಿತಿ, ಕಲಘಟಗಿ ಇವರ ಸಹಿ ಇರುತ್ತದೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಅಧಿಕಾರಿಗಳು ಸೇರ್ಪಡೆ ಮಾಡಿಕೊಳ್ಳದಿದ್ದರಿಂದ ಮತ್ತು

ಅವರಿಂದ ಸಂಬಂಧಪಟ್ಟ ದಾಖಲಾತಿಗಳನ್ನು ತರಿಸಿಕೊಳ್ಳದಿದ್ದರಿಂದ ಹಣ ಆ.ಸ.ನೌರವರಿಂದ ಮಾತ್ರ ದುರುಪಯೋಗವಾಗಿರುತ್ತದೆ ಅಂತಾ ಶಿಸ್ತು ಪ್ರಾಧಿಕಾರವು ರುಜುವಾತುಪಡಿಸಿರುವುದಿಲ್ಲ.

27.ಆ.ಸ.ನೌ ರವರ ಪ್ರಕಾರ ದೂರುದಾರರು ಸರ್ವೆ ನಂ.152 ಇದು ಗ್ರಾಮ ಪಂಚಾಯಿತಿಗೆ ಸೇರಿದ ಆಸ್ತಿ ಇದ್ದು, ಅದರಲ್ಲಿ 0.37 ಗುಂಟೆಯನ್ನು ದೂರುದಾರರು ಕಾನೂನು ಬಾಹಿರವಾಗಿ ಸ್ವಾಧೀನ ಪಡೆದುಕೊಂಡಿದ್ದರಿಂದ ಈ ಬಗ್ಗೆ ಗ್ರಾಮ ಪಂಚಾಯಿತಿಯ ವತಿಯಿಂದ ಸಿವಿಲ್ ದಾವೆಯನ್ನು ಕಲಘಟಗಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಅದು ತಮ್ಮ ಪರವಾಗಿ ಆಗಿದ್ದು ಅದನ್ನು ಪ್ರಶ್ನಿಸಿ ದೂರುದಾರರು ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡಲ್ಲಿ ರಿಟ್ ಪಿಟಿಷನ್ ನಂ.84454/2013ನ್ನು ದಾಖಲಿಸಿದ್ದು, ಸದರಿ ರಿಟ್ ಪಿಟಿಷನ್ ಅನ್ನು 2015ನೇ ಸಾಲಿನಲ್ಲಿ ಹಿಂದಕ್ಕೆ ಪಡೆದುಕೊಂಡಿದ್ದು, ಅದು ವಜಾಗೊಂಡಿರುತ್ತದೆ ಅಂತಾ ಹೇಳಿರುತ್ತಾರೆ. ಈ ಬಗ್ಗೆ ಸದರಿ ರಿಟ್ ಪಿಟಿಷನ್‌ದಲ್ಲಿ synopsis, memorandum of petition, interim order & certified copy of the order sheet ನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಡಿ.1 ಮತ್ತು ನಿ.ಡಿ.2 ಎಂದು ಗುರುತಿಸಲಾಗಿರುತ್ತದೆ. ನಿ.ಡಿ.1ರಲ್ಲಿ ದೂರುದಾರರ ಪ್ರಕಾರ ಸರ್ವೆ ನಂ.152ರಲ್ಲಿ 120x22 ಅಡಿ ಜಾಗವನ್ನು ದೂರುದಾರರ ತಂದೆಯವರು ಕ್ರಯಾ ಪತ್ರದ ಮೂಲಕ ಖರೀದಿ ಮಾಡಿದ್ದು, ಇವರ ತಂದೆಯವರು ಹಲವಾರು ಬಾರಿ ಗ್ರಾಮ ಪಂಚಾಯಿತಿ ಗಳಗಿ ಇವರಿಗೆ ಅರ್ಜಿಯನ್ನು ಸಲ್ಲಿಸಿದ್ದು ಆದರೆ ಅವರ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದು ಆಗಿರುವುದಿಲ್ಲ ನಂತರ ದೂರುದಾರರ ತಂದೆ ಮೃತಪಟ್ಟ ನಂತರ ತಾನು ಅರ್ಜಿ ಸಲ್ಲಿಸಿದ್ದು, ಅದಕ್ಕೆ ಗ್ರಾಮ ಪಂಚಾಯಿತಿಯವರು ತನ್ನ ಹೆಸರನ್ನು ಖಾತಾ ಉತಾರಿಯಲ್ಲಿ ದಾಖಲಾಗಬೇಕೆಂದು ಆದೇಶ ಮಾಡಿದ್ದರೂ ಸಹಿತ ಗ್ರಾಮ ಪಂಚಾಯತಿ ಗಳಗಿ ಇವರು ತಮ್ಮ ಹೆಸರನ್ನು ನಮೂದು ಮಾಡಿರುವುದಿಲ್ಲ ಅಂತಾ ನಮೂದು ಮಾಡಿರುತ್ತಾರೆ. ನಂತರ ತನಗೆ ಯಾವುದೇ ನೋಟಿಸನ್ನು ನೀಡದೇ ಗಳಗಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ರವರು ಪೋಲಿಸ್ ಮುಖಾಂತರ ತನ್ನ ಜಾಗಕ್ಕೆ ಬಂದಿದ್ದು ಸದರಿ ಸರ್ವೆ ನಂಬರ್‌ನಲ್ಲಿದ್ದ ಮನೆಯನ್ನು ಬೀಳಿಸಿದ್ದು ಮತ್ತು ತನ್ನ ಆಸ್ತಿಯಿಂದ ಹೊರಗಡೆ ಹಾಕಿರುತ್ತಾರೆ ಅಂತಾ ನಮೂದು ಇರುತ್ತದೆ. ರಿಟ್ ಪಿಟಿಷನ್‌ನ

ಆರ್ಡರ್ ಶೀಟ್‌ನ್ನು ನೋಡಲಾಗಿ ದಿನಾಂಕ: 02/11/2015 ರಂದು ದೂರುದಾರರು ಸದರಿ ರಿಟ್ ಪಿಟಿಷನ್ ಹಿಂದಕ್ಕೆ ಪಡೆದುಕೊಳ್ಳು ಅರ್ಜಿಯನ್ನು ಸಲ್ಲಿಸಿದ್ದು, ಅದರ ಪ್ರಕಾರ ರಿಟ್ ಪಿಟಿಷನ್ ಅನ್ನು ವಜಾಗೊಳಿಸಲಾಗಿರುತ್ತದೆ. ಅದೇ ರೀತಿ ಆ.ಸ.ನೌರವರು ಸದರಿ ಸರ್ವೆ ನಂಬರ್‌ಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಪಹಣಿ ಪತ್ರಿಕೆಯಲ್ಲಿ 2020-21 ನೇ ಸಾಲಿನಲ್ಲಿ ಸದರಿ ಆಸ್ತಿಯು ಗ್ರಾಮ ಪಂಚಾಯತಿ ಗಳಗಿ ಇವರ ಹೆಸರಿನಲ್ಲಿರುತ್ತದೆ. ಈ ದಾಖಲಾತಿಗಳಿಂದ ದೂರುದಾರರಿಗೂ ಮತ್ತು ಗಳಗಿ ಗ್ರಾಮ ಪಂಚಾಯಿತಿಯ ನಡುವೆ ಆಸ್ತಿಯ ಸಂಬಂಧ ತಕರಾರು ನಡೆದಿತ್ತು ಅಂತಾ ಕಂಡುಬರುತ್ತದೆ. ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ಈ ವಿಚಾರಣೆಯಲ್ಲಿ ರೂ.7,82,784/-ಗಳನ್ನು ಆ.ಸ.ನೌರವರೇ ದುರುಪಯೋಗ ಪಡಿಸಿಕೊಂಡಿರುತ್ತಾರೆ ಎನ್ನುವುದಕ್ಕೆ ಸಮರ್ಪಕ ದಾಖಲಾತಿಗಳು ಇಲ್ಲದಿರುವುದರಿಂದ ಶಿಸ್ತು ಪ್ರಾಧಿಕಾರವು ದೋಷಾರೋಪಣೆಯಲ್ಲಿ ಹೇಳಿದ ವಿಷಯವನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ.

28. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ-1ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

29. **ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ಪ್ರಕಾಶ ಹಾಲಮ್ಮನವರ,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗಳಗಿ ಗ್ರಾಮ ಪಂಚಾಯಿತಿ, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು

ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ವಿಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 31/05/2029 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

3/2

(ಸುದೇಶ್ ರಾಜಾರಾಮ್ ಪರದೇಶಿ)
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. G.M Rajanna S/o A Munegowda, Thimmasandra, Doddaballapura Taluk, Bengaluru. |
| 2 | **Documents marked on behalf of the Disciplinary Authority Ex.P-1 to Ex.P-21** | |
| | **Ex.P.1** | Complaint given to this institution dtd: 10/06/2014. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Estimation copy. |
| | **Ex.P.5** | Estimation copy. |
| | **Ex.P.6** | Muster roll. |
| | **Ex.P.7** | Muster roll. |
| | **Ex.P.8** | Muster roll. |
| | **Ex.P.9** | First & Final bill. |
| | **Ex.P. 10** | First & Final bill. |
| | **Ex.P. 11** | Muster roll. |
| | **Ex.P. 12** | Muster roll. |
| | **Ex.P. 13** | Muster roll. |
| | **Ex.P. 14** | Muster roll. |
| | **Ex.P. 15** | Muster roll. |
| | **Ex.P. 16** | First & Final bill. |
| | **Ex.P. 17** | M.B Book. |

| | | |
|---|---|---|
| | **Ex.P. 18** | First & Final bill. |
| | **Ex.P. 19** | First & Final bill. |
| | **Ex.P. 20** | Application submitted by workers to Panchayath. |
| | **Ex.P. 21** | First & Final bill. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Prakash Rudrappa Halammanavar S/o Rudrappa Hanumanthappa Halammanavar Executive Officer, Taluk Panchayath, Khanapur. |
| 4 | **Documents marked on behalf of the DGOs through the complainant** | |
| | **Ex.D.1** | W.P. No.84454/2013 in the High Court of Karnataka, Dharwad Bench. |
| | **Ex.D.2** | Interim order. |
| | **Ex.D.3** | RTC. |
| | **Ex.D.4** | Faisal pathrike & Akarband. |
| | **Ex.D.5** | RTC. |
| | **Ex.D.6** | Letter of Assistant Commissioner, Dharwad. |

Dated this the 3rd February, 2022

Sd/- 3/2

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.